BUDGET ESTIMATES FOR 1979-80

GENERAL DISCUSSION—(*Debate continued*)

†ಶ್ರೀ ಪಿ. ಕೆ. ಕಳ್ಳೀಗುಡ್ಡ (ಬಾಗಲಕೋಟೆ).—ಸನ್ಮಾನ್ಯ ಅಧ್ಯಕ್ಷರೆ ನಮ್ಮ ಹಣಕಾಸಿನ ಮಾನ್ಯ ಮಂತ್ರಿಗಳು ಮಂಡಿಸಿದ ಹಣಕಾಸಿನ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತಾ ಎರಡೇ ಎರಡು ಮಾತುಗಳನ್ನು ಆಡಲಿಚ್ಛಿಸುತ್ತೇನೆ. ಅಧ್ಯಕ್ಷರೆ ನನ್ನ ವಿರೋಧಿ ಅಣ್ಣತಮ್ಮಂದಿರು ಹಣಕಾಸಿನ ವಿಚಾರ ಮಾತನಾಡದೇ ಬರೇ ಮಂತ್ರಿಗಳು ಹಾಗೆ ಬಂದಿರಿ, ಹೀಗೆ ಮಂತ್ರಿಗಳಾದಿರಿ, ಹಿಂದಿನ ಬಾಗಿಲಿನಿಂದ ಬಂದಿರಿ ಬಡಬಗ್ಗರನ್ನು ಬಡವರಾಗಿ ಉಳಿಸುತ್ತೀರಿ ಎನ್ನುವ ಮಾತನ್ನು ಹೇಳಿದರು. ಇದನ್ನೆಲ್ಲಾ ಮಾನ್ಯ ಸದಸ್ಯರು ಹೇಳಬಾರದು. ಏತಕ್ಕೆಂದರೆ ಈಗ ೧೫೦ ಮಂದಿ ಸದಸ್ಯರು ಆರಿಸಿ ಬಂದಿದ್ದಾರೆ. ಅದರಲ್ಲಿ ಮಂತ್ರಿಗಳಾಗಿದ್ದಾರೆ. ಆದ್ದರಿಂದ ಈ ವಿಷಯ ಏತಕ್ಕೆ ಹೇಳಬೇಕು ಎಂದು ಕೇಳುತ್ತೇನೆ. ಇನ್ನು ಕೆಲವು ಸದಸ್ಯರು ಬೆಕ್ಕು, ಇಲಿಗಳು ಎಂದು ಹೇಳಿದರು. ಇದನ್ನೆಲ್ಲಾ ಏತಕ್ಕ ಹೇಳಬೇಕು ಎಂದು ಕೇಳುತ್ತೇನೆ. ಇನ್ನು ಕೆಲವು ನನ್ನ ಅಣ್ಣತಮ್ಮಂದಿರು ಬೆಂಗಳೂರಿನ ಒಂದೇ ವಿಷಯವನ್ನು ಎರಡೂ ಮೂರು ತಾಸುಗಳ ಕಾಲ ಮಾತನಾಡುತ್ತಾರೆ. ಬೆಂಗಳೂರು ವಿಷಯ ಒಂದಕ್ಕೆ ಈ ವಿಧಾನ ಸೌಧ ಸಂಬಂಧಪಟ್ಟಿದೆ ಏನು ? ಬೆಂಗಳೂರು ವಿಷಯದ ಬಗ್ಗೆ ಒಬ್ಬ ಸದಸ್ಯರು ಏನು ಹೇಳುತ್ತಾರೆ, ಇನ್ನೊಬ್ಬ ಸದಸ್ಯರು ಅದನ್ನೇ ಹೇಳುತ್ತಾರೆ, ಮತ್ತೊಬ್ಬ ಸದಸ್ಯರು ಅದನ್ನೇ ಹೇಳುತ್ತಾರೆ. ಹಳ್ಳಿಗಳ ವಿಷಯದ ಬಗ್ಗೆ ಇವೊತ್ತು ಇವರಿಗೆ ಲಕ್ಷ್ಯ ಇಲ್ಲದೇ ಹೋಗಿದೆ. ಅಧ್ಯಕ್ಷರೆ, ಇವೊತ್ತು ಬಡವರು ಬಡವರಾಗಿ ಉಳಿದಿಲ್ಲ. ಬಡ ಬಗ್ಗರಿಗೆ ನಮ್ಮ ಸರಕಾರ ಬಹಳ ಸಹಾಯ ಮಾಡುತ್ತಲಿದೆ. ಮುಂದೆ ಕೂಡ ಮಾಡುತ್ತದೆ. ಈಗ ಬಡವರ ಬಗ್ಗೆ ಭಾಗ್ಯ ಜ್ಯೋತಿ ಬಂದಿದೆ ಇದನ್ನು ಸುವರ್ಣಾಕ್ಷರಗಳಿಂದ ಬರೆದಿಡತಕ್ಕ ವಿಷಯ. ಇದನ್ನು ಮಾನ್ಯ ಸದಸ್ಯರು ಲಕ್ಷ್ಯದಲ್ಲಿ ಇಡಬೇಕು. ಇನ್ನು ನಮ್ಮ ಸರ್ಕಾರ ಬಡ್ಜೆಟ್ಟಿನಲ್ಲಿ ಬಡಬಗ್ಗರ ಬಗ್ಗೆ ಅನುಕೂಲ ಮಾಡಿಕೊಟ್ಟಿದೆ. ನಮ್ಮ ಸದಸ್ಯರೊಬ್ಬರು ಹೆಣ್ಣುಮಕ್ಕಳ ಬಗ್ಗೆ ಏನೂ ಮಾಡಿಲ್ಲ ಎಂದು ಹೇಳಿದರು ಹೆಣ್ಣುಮಕ್ಕಳ ದೃಷ್ಟಿಯಿಂದ ಬಹಳ ಮಹತ್ವ ಕೊಟ್ಟಿದೆ, ಕೊಡುತ್ತಲಿದೆ. ಇದರ ಬಗ್ಗೆ ಮಾನ್ಯ ಅರ್ಥ ಮಂತ್ರಿಗಳು ತಮ್ಮ ಆಯವ್ಯಯ ಪತ್ರದ ಹದಿನಾಲ್ಕನೇ ಪುಟದಲ್ಲಿ ಈ ರೀತಿ ಹೇಳಿದ್ದಾರೆ.

> "೮೪೩ ಮಹಿಳೆಯರಿಂದ ಕೂಡಿದ ೫೬ ಹೊಲಿಗೆ ಕೇಂದ್ರಗಳನ್ನು ಮತ್ತು ಹೊಲಿಗೆ ಉತ್ಪಾದನ ಘಟಕಗಳನ್ನು ೧೪೦ ಮಹಿಳಾ ತರಬೇತುಗಾರರಿಂದ ಕೂಡಿದ ೭ ತೆಂಗಿನ ನಾರಿನ ಘಟಕಗಳನ್ನು ಮತ್ತು ೪೦ ಮಹಿಳಾ ತರಬೇತಿಗಾರರಿರುವ ೨ ಅರಗು ಸಾಮಾನು ತಯಾರಿಕೆಯ ಕೇಂದ್ರಗಳನ್ನು ನಡೆಸಿಕೊಂಡು ಬರಲಾಗುತ್ತಿದೆ."

ಇನ್ನು ಅಧಿಸೂಚನೆಯಿಂದ ತೆಗೆದು ಹಾಕಿದ ಮತ್ತು ಅಲೆಮಾರಿ ಪಂಗಡಗಳಿಗೆ ಸೇರಿದ ೧,೦೬೧ ಮೆಟ್ರಿಕ್ ಪೂರ್ವ ಮತ್ತು ೨,೫೨೪ ಮೆಟ್ರಿಕ್ ಅನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನು ನೀಡಲಾಗುತ್ತಿದೆ. ೧,೫೦೨ ವಿದ್ಯಾರ್ಥಿಗಳಿರುವ ೨೯ ವಿದ್ಯಾರ್ಥಿ ನಿಲಯಗಳಿವೆ. ಇದರಿಂದ ಬಹಳ ಸಹಾಯವಾಗುತ್ತದೆ. ಇನ್ನು ಭೂ ನ್ಯಾಯ ಮಂಡಲಿಯ ವಿಷಯವಾಗಿ ಹೇಳಬೇಕು ಅಂದರೆ ಇದರ ಬಗ್ಗೆ ನಮ್ಮ ಮಾನ್ಯ ದೇವೇಗೌಡರು ಬಂದು ನಮ್ಮ ಟ್ರಿಬ್ಯುನಲ್‌ನಲ್ಲಿ ನಾನು ತಪ್ಪು ಮಾಡಿರುವುದನ್ನು ತೋರಿಸಿದರೆ ನಾನು ಎಂ.ಎಲ್.ಎ. ಸೀಟು ಬಿಟ್ಟು ಮನೆಗೆ ಹೋಗುತ್ತೇನೆ. ಇವೊತ್ತು ನಮ್ಮಲ್ಲಿರತಕ್ಕ ಟ್ರಿಬ್ಯುನಲ್ ಸದಸ್ಯರು ಬಹಳ ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಚಲೋ ಮಂದಿ ಇದ್ದಾರೆ. ಇದಕ್ಕೆ ಒಂದು ಉದಾಹರಣೆ ಹೇಳಬೇಕು ಅಂದರೆ ಒಂದು ಮನೆಯಲ್ಲಿ ಒಬ್ಬ ಸೊಸೆ ಇರುತ್ತಾಳೆ, ಅವಳು ಎಲ್ಲರಿಗೂ ಹೊಂದಿಕೊಂಡು ಹೋಗಬೇಕಾಗುತ್ತದೆ. ಸೊಸೆ ಅಡುಗೆ ಮಾಡಿರುತ್ತಾಳೆ, ಮತ್ತೆ ಅತ್ತೆ ಅಡುಗೆ ಮಾಡಿದ್ದಕ್ಕೆ ಉಪ್ಪು ಹಾಕುತ್ತಾಳೆ. ಆ ಪ್ರಕಾರ ಆದರೆ ಹೇಗೆ, ಇವೊತ್ತು ನನ್ನಲ್ಲಿ ದೋಷ ಇಲ್ಲ ಆದ್ದರಿಂದ ನಾನು ಈ ರೀತಿ ಹೇಳಬೇಕಾಗಿದೆ. ಇನ್ನು ಮಾನ್ಯ ಸದಸ್ಯರಾದ ಎಸ್.ಎಸ್. ಅರಕೇರಿಯವರು ಬಸವೇಶ್ವರ ವಿದ್ಯಾವರ್ಧಕ ಸಂಘದಲ್ಲಿ ಇತರೇ ಜಾತಿಯವರನ್ನು ತೆಗೆದುಕೊಂಡಿಲ್ಲ ಎಂದು ಹೇಳಿದರು. ಸರ್ಕಾರದಿಂದ ಏನು ಆದೇಶ ಬಂದಿದೆ ಆ ಪ್ರಕಾರ ತೆಗೆದು ಕೊಂಡಿದ್ದೇವೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಅರಕೇರಿಯವರು ಪೂರ್ಣವಾಗಿ ವಿಚಾರ ನೋಡಿಕೊಂಡು ಮಾತನಾಡಬೇಕಾಗಿತ್ತು ಎಂದು ನನ್ನ ಸ್ಪಷ್ಟ ಅಭಿಪ್ರಾಯ. ಈ ಬಗ್ಗೆ ಮಾನ್ಯ ಸದಸ್ಯರಾದ ಅರಕೇರಿಯವರು ಕೇಳಿದರೆ ನಾನು

ವಿಚಾರ ತಿಳಿಸಲಿಕ್ಕೆ ಸಿದ್ಧನಿದ್ದೇನೆ. ಇನ್ನು ಅಪ್ಪರ್ ಕೃಷ್ಣಾ ಯೋಜನೆ ದೊಡ್ಡದು. ಮೊದಲ ಯೋಜನೆ ೧೬೮೦ ಅದು ಅಷ್ಟೇ ಆಗಲಿ, ಯೋಜನೆಗೆ ನಮ್ಮದು ಏನೂ ತಕರಾರು ಇಲ್ಲ. ಈಗ ೧೭೦೦ ಮಾಡಬೇಕೆಂದು ಹೇಳುತ್ತಾರೆ, ಒಟ್ಟಿನಲ್ಲಿ ಬಾಗಲಕೋಟೆಯನ್ನು ಉಳಿಸಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇವೊತ್ತು ಬಾಗಲಕೋಟೆ ಅಂತಹ ದೊಡ್ಡ ಶಹರ ಮುಳಗದಂತೆ ಮಾಡಲೇ ಬೇಕು. ಈ ಯೋಜನೆಯಲ್ಲಿ ಬಾಗಲಕೋಟೆ ಉಳಿಸುತ್ತೇವೆಂದು ಮಾನ್ಯ ನಿಜಲಿಂಗಪ್ಪನವರು ಆರಿಸಿ ಬಂದರು, ಆದರೆ ಅವರು ಏನೂ ಮಾಡಲಿಲ್ಲ. ಈಗ ಸನ್ಮಾನ್ಯ ದೇವರಾಜ್ ಅರಸ್ ಅವರು ಬಾಗಲ ಕೋಟೆಯನ್ನು ಉಳಿಸುವರೆಂದು ನಂಬಿದ್ದೇವೆ. ಇವರು ಏನು ಮಾಡುತ್ತಾರೆಂದು ಕಾದು ನೋಡ ಬೇಕಾಗಿದೆ. ಇನ್ನು ಆಕ್ಟ್ರಾಯಿ ರದ್ದು ಪಡಿಸಿದ್ದರ ಬಗ್ಗೆ ನಮ್ಮ ಹಣಕಾಸಿನ ಸಚಿವರು ತಿಳಿಸುರುವ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಇದನ್ನು ನೋಡಿದಂತಹ ಮುನಿಸಿಪಾಲಿಟಿಯವರು ಠಕ ಠಕ ಅಂಥ ಜೀವ ಬಿಡಲಿಕ್ಕೆ ಹತ್ತಿದ್ದಾರೆ. ಇದನ್ನು ನೋಡಿ ಬಾಗಲಕೋಟೆಯಲ್ಲಿ ಯಾರೋ ಒಬ್ಬರು ತೀರಿಕೊಂಡರು, ಆದುದರಿಂಗ ಇದರ ಬಗ್ಗೆ ಪೇಪರ್‌ನಲ್ಲಿ ಜನತೆಗೆ ಅರ್ಥವಾಗುವಂತೆ ತಿಳುವಳಿಕೆ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಇವೊತ್ತು ಆಕ್ಟ್ರಾಯಿ ರದ್ದು ಮಾಡಿರುವುದರಿಂದ ಮುನಿಸಿಪಾಲಿಟಿಯಲ್ಲಿ ಕೆಲಸ ಮಾಡ ತಕ್ಕ ಬಡಬಗ್ಗರಾದಂತಹ ನೌಕರರಿಗೆ ರೊಕ್ಕ ಸಿಕುತ್ತದೆಯೋ ಇಲ್ಲವೇ ಎನ್ನುವುದು ಬಂದಿದೆ. ಏಕೆಂದರೆ ಮುನಿಸಿಪಾಲಿಟಿಯವರು ಪಗಾರ ಕೊಡದೇ ಹೋದರೆ ಅವರು ಮುಗಿಲಕಡೆ ಬಾಯಿ ಬಿಡಬೇಕಾಗುತ್ತದೆ. ಆದುದರಿಂದ ಆ ಕಡೆ ನೋಡಬೇಕೆಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಈಗ ಹ್ಯಾಂಡ್‌ಲೂಂ ಮೇಲೆ ೨ ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದೀರಿ. ಇದು ಬಡವರು ಮಾಡತಕ್ಕ ಉದ್ಯಮ ಆದ್ದರಿಂದ ಇದಕ್ಕೆ ಹಾಕಿರತಕ್ಕ ಟ್ಯಾಕ್ಸ್ ಬಗ್ಗೆ ಇನ್ನೊಂದು ಸಾರಿ ಪರಿಶೀಲಿಸಬೇಕು. ಇದು ನನ್ನ ಅಭಿಪ್ರಾಯ.

ಇನ್ನು ನಮ್ಮ ಬಾಗಲಕೋಟೆ ತಾಲ್ಲೂಕಿನಲ್ಲಿ ಶಲ್ಲಿಕೇರಿ ಗ್ರಾಮ ಎಂದು ಇದೆ. ಅಲ್ಲಿ ಹೇರಳವಾಗಿ ಸಿಮೆಂಟ್ ಕಲ್ಲು ಸಿಗುತ್ತದೆ. ಆದ್ದರಿಂದ ಅಲ್ಲಿ ಒಂದು ಮಿನಿ ಸಿಮೆಂಟ್ ಫ್ಯಾಕ್ಟರಿಯನ್ನು ಆದಷ್ಟು ಬೇಗನೇ ತೆರೆಯಬೇಕೆಂದು ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಗರೀಬಿ ಹಠಾವೊ ಬಗ್ಗೆ ಹೇಳಿದರು. ಗರೀಬಿ ಹಠಾವೊ ಎಂದು ಹೇಳುವುದನ್ನು ಕೇಳಿದರೆ ಜನರು ಘಾಬರಿಯಾಗುತ್ತಾರೆ. ಹಿಂದಕ್ಕೆ ಮಹಾತ್ಮಾ ಗಾಂಧೀ ಜಿಯವರು "ಛಲೇಜಾವ್" ಎಂದರೆ ಬ್ರಿಟಿಷರು ಹಿಂದೆ ಹೋಗುತ್ತಿದ್ದರು. ನಾವು ಬಡ ಜನರು, ಬಡವರಿಂದಲೇ ಆರಿಸಿ ಬಂದಿದ್ದೇವೆ. ನಮ್ಮಲ್ಲಿ ಟಿಕೆಟ್ ಸಿಕ್ಕಿರುವುದೂ ಕೂಡ ಬಹಳ ಮಂದಿ ಬಡವರಿಗೇ. ನಮ್ಮ ಜೊತೆಯಲ್ಲಿ ೬೨ ಮಂದಿ ಸದಸ್ಯರು ಬಡವರಿದ್ದಾರೆ. ಚುನಾವಣೆ ಕಾಲದಲ್ಲಿ ಇವರಿಗೆ ಬೇರೆ ಯಾರೂ ಸಿಕ್ಕಲಿಲ್ಲವೆಂದು ಕಾಣುತ್ತದೆ. ಆದ್ಧರಿಂದಲೇ ನಮ್ಮನ್ನು ಹಿಡಿದುಕೊಂಡು ಬಂದು ನಮಗೆ ಟಿಕೆಟ್ ಕೊಟ್ಟಿದ್ದಾರೆ. ನಾವು ಬಡ ಜನರಿಂದ ಆರಿಸಿ ಬಂದಿರುವುದರಿಂದ ನಾವು ಬಡವರ ಬಗ್ಗೆ ಬಹಳ ಕಾಳಜಿ ಇಟ್ಟುಕೊಂಡಿದ್ದೇವೆ. ನಾವು ಈಗ ಮಾಡುವ ಕೆಲಸವನ್ನು ನೋಡಿ ಮತ್ತೊಮ್ಮೆ ಆ ಬಡಜನರು ನಮ್ಮನ್ನೇ ಆರಿಸಿ ಕಳುಹಿಸುತ್ತಾರೆ. ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತಗಳನ್ನು ಮುಗಿಸುತ್ತೇನೆ.

†SRI A LAKSHMI SAGAR (Chickpet) .—Sir, the Hon. Finance Minister has made a longest speech while presenting his budget proposals before this House. Apart from the length of the speech he made I do not find anything worthwhile in the budget he has presented before this House. The only point I may mention as points which are distinguishing are Employment Affirmation Scheme, Abolition of Octroi and Bhagyajotsi Light. There is nothing new in the budget proposals which my learned friend has placed before this House. His speech is a men repetative and not sugges ive, laudatary and a e tautolgical and I am placing before the House few important points which in my opinion are worth noted.

The Hon. Finance Minister in page 4 effersto resources of the State Government. It reads : "Now that the resources of the State Government and of the Central Government are known-and the formula for grant of Central assistance has been finalised-we are in a position to take a specific view of the Annual Plan 1979-80, though there was a delay of a couple of months in finalising the Annual Plan". Very good. Please read the next sentence. "Even now, as we are entering the second year of the new (Sixth) plan, we have no idea what would be its ultimate size for Karnataka". Then please see page 56. It reads : "However, due to the delay in the finali sation of the Annual Plan 1979-80 (even in the total size of the State Plan was finalised only by the end of January, 1979-and the future of the Centrally sponsored Schems was determined in the third week of February) and as detailed work had to be done after the sectoral allocations were fixed, it has just been possible for us to prepare the detailed Budget and come up before the Hon'ble House to-day". There is a some contradiction in your statement. It can be verified from your budget speech. You have stated that State Plan was finalised in January.

SRI S. M. YAHYA .—Plan is different from 5th Five Year Plan. I have said about the Annual Plan.

SRI A. LAKSHMI SAGAR .—You should have added that. It apprers to me as though a part of the speech was prepared earlier and the later portion at a later date. I have stated in my last time general discussion on budget that economic survey would be made availble to the Members for a meanigful discussion on the budget proposals. I am glad my learned friend has been able to prepare the report but unfortunatly the copy reached me only this afternoon. I have no occasion to go through it and therefore, I do not have the benefit of the survey presented for the year 1978-79.

MR. CHAIRMAN .—They must have prepared that survey in order to facilitate you to speak.

SRI A. LAKSHMI SAGAR.—Sir, that is what I said. I cannot argue my case without going through the papers. I cannot make my comments.

SRI S. M. YAHYA .—We have presented to the Members. It was little delayed.

SRI A. LAKSHMI SAGAR .—Although it was printed on 27th March 1979, you have supplied to me only to-day. My only point is that it is not all benefit to me in order to understand the implications of last year's budget since I have received only to-day.

Then, Sir, one noticeable feature of the budget proposal is moneys are being increasingly spent year after year. There is no doubt about it. My freind last year had stated that it is a incremental budget. He also went to the extent of saying that this is the pattern without going into the philosophical aspect of the concept of incremental budget. I would have been very happy if the moneys have been spent properly and the philosophical targets achieved thereon. They have not done that. The date is not forthcoming in terms of achieving philosophical targets and it dces not commensurate with the moneys spent on different sections and on different sectors. This is the crux of the problem. Because they were not in a position to find out and to know the exact impact of moneys that have been expended. This aspect of matter does not find a place in the budget proposals. The entire exercise it appears to me that it is created in the darkness how to spend You do not know the impact of moneys that have been so spent in terms of philosophical path.

3. 30 P.M.

I may give one or two instances to illustrate my point. The Minister has gloated over the number of achievements and particularly he has mentioned the amounts of money spent on various programmes to help the small and marginal farmers. the drought-prone area programme, the minimum needs programmes, etc. But what is the economic position of the beneficiaries under these schemes before these schemes were introduced and their condition after the implementation of these schemes, I do not have any idea. How many pepole are left over in those areas who have not still come within the purview of these schemes, we do not have facts and figures. Therefore, it is very difficult to know how exactly the money is being spent. It is also stated that Rs. 18.11 Lakhs in 1976-77 and Rs. 6.6 lakhs in 1977-78 have been spent as loans for the welfare of the S.Cs/S.Ts by Scheduled Castes and Tribes Development Corporation. Is this amount sufficient to meet the requirements of the people for whom it is intended ? According to me, it is a very big problem. The monies you have been able to set apart for the amelioration of the condition of these people are insignificant. What about the condition of the other people for whose benefits corporation have been established, what amounts have been spent and how the beneficiaries under those schemes are benefited, we do not have figures.

One most talked-about thing and which formed part of the 20-point programme during the emergency was the question of abolition of bonded labourers. in the State of Karnataka. According to the

figures given in the Sixth Plan, about 64,000 bounded labourers were freed. In this connection, I wish to read a few cuttings from the editorial of the Deccan Herald dated 24th February 1979.

> "According to a national survey conducted by the Gandhi Peace Foundation and the National Labour Institute, there are over 2.8 million bonded laboures in this country........... According to the survey, Karnataka has 1.93 lakhs."

You have been able to liberate roughly one-third of the total number of bonded labourcrs in the State of Karnataka. The editorial goes on to say.

> "Yet another significant conclusion reached by the survey is that 66 per cent of bonded labourere belong to the Scheduled Castes, 18.3 percent to the Scheduled Tribes, and that 84.2 percent of the masters are caste Hindus."

What have you done in respect of the other 1,27,000 bonded labourers who are yet to be liberated ? Secondly, what is it that you have done in the case of the so called liberated bonded labourers ? No figures are forthcoming. With your permission. Sir, I will read a few sentences again from the Deccan Herald.

> "Abolition of bonded labour formed part of the 20-point programme of the Indira Government. During the Emergency many State Governments including Karnataka claimed to have taken steps to free bonded labourers. The question is whether the labourers claimed to have been freed have been really rehabiliated. even in Karnataka, where the number of those released is said to be impressive, their plight has worsended. They are forced to go back to their old masters or find new ones to raise loans, to meet their daily needs and to discharge family or social obligations like festivals and ceremonies. The most urgent task before the Government is to chalk out a rehabilitation programme by which the released laboureres become wage-earners and their conditions of work are regulated."

What concrete steps have been taken by the Government is not indicated, I must mention in fairness to the Hon. Finance Minister that the sum of Rs. 13 laksh has been set apart during the current year for the benefit of these 64,000 freed bonded labourers. It will work out to Rs. 20.30 per head per year and will be less than Rs. 2 per month. This is how you want to help the so called freed bonded labourers in this State. I should say without any fear of contradiction that you have not been able to help them so far and the help you are now offering is worse than the promise you made. they have

lost their old masters and have not been able to find new masters to protect them. The promised land for the rehabilitation of these bonded labourers is not there. Without using a very strong language, I should say that this is a fraud on the bonded labourers.

About old-age pension I made this point last year also. You have not been able to give districtwise and talukwise figures as well as urban and rural figures in respect of the recepients of old-age pensions. You must be in a position to know how many of them are male and how many women, how are you going to measure the benefit offered every year, to whom the benefit has gone, to which area and which section of the people it has benefited. Similarly, in the case of stipends to unemployed educated people, with great fanfare it was announced last year. But we do know how many unemployed degree and diploma holders have been able to get benefit under this scheme.

SRI S. M. YAHYA.—We have given this benefit to 8,000 people.

SRI A. LAKSHMI SAGAR.—Has it gone to cities and towns or to the rural area ? Thise is what we want to know. We do not find fault with the scheme as such but the snag is how the money is being spent.

Then you have with great enthusiasm announced the launching of the scheme to benefit rural people *viz.* the employment affirmation scheme. The scheme is intended to cover about 45 taluks with a total expenditure of Rs. 6[illegible] crores and it is intended to extend to another 45 Taluks in the State this year alone. In my submission this may temporarily provide jobs for 100 days to persons who do not find employment during the slack agricultural season. It is well conceived. I have my own doubt about the proper and efficient implementation of this scheme. Lot of corruption, mismanagement in the distribution of grains and other matters will be there over which no Government can exercise control. Further, it is also very difficult to find this people remove themselves to the places of work or people not readily available at the places you will have to provide transport and there are so many other matters connected. Therefore, I have got my own doubts about success of the scheme. More important than all these is that it only provides doles though you may say we will give some money and work you give them. Induce in the minds of the beneficiaries to be dependant always on the Government held. This is one drawback of the scheme. Secondly, it is likely to be misused for political purposes. Thirdly, and the most basic point I should like on this point is that it does not help to remove basic poverty in the rural areas. It does not make the rural

poor to become self-reliant, to become economically strong, to become economically self dependant. This scheme will perpetually keep them as labourers waiting for 100 days to come. Therefore, these are all some of the draw backs which I see in the scheme and it will not ultimately add to the economic growth of these sections of the people. Therefore, it is better that before the moneys are wasted "not small amount, 16 crores" during the current year a more realistic scheme which would help the growth of wealth and removal of basic poverty in this state should be attempted. You may be alergic to the concept of Anthyodaya scheme. I am saying particularly about Anthyodaya scheme, you may call it by any name but the central theme of the scheme is to help to the rural people. You must enable them to grow economically strong and then self-reliant and try to abolish basic poverty in this country and that is lacking in this scheme. I drew your attention last year to the benefit that was derived from the implementation of the five year plans and the benefits largely having been cornored by influential section of the society and this point was made by the Hon. Chief Minister in his address to the National Development Council meeting last year. This has not been contradicted. It is true he made such a statement. I also tell in connection with it that the budget proposals indicate to reverse this process. No effort has been made to see that the benefit under the implementation of the planned schemes reaches the persons at the last rung of the ladder in the economic hierarchy No effort has been made and the same trend persists. Furhter, the Hon. Chief Minister again made a point at the recent National Development Council meeting. This is in reference to the farm prices. This is what he said.

> "It is imperative that the price of agricultural programmes be devided which should include inputs cheaper and import steability to agriculture and remunerative agricultural prices".

These are very good steps taken in the budget proposals to implement this scheme. No doubt you have announced support prices to a few agricultural products. The suggestion goes beyond the support prices here in affording remunerative price to the agriculturists you have yourselves stated that a situation has developed in this State or in this country that there must be a parity in the price that is paid to the agricultural products in reference to wages paid to industrial workers. Have you been able to implement the scheme in your budget?. My friends Sri J. H. Patel and Sri S. R. Bommai have drawn the attention of the House that agriculturists are in great difficulty. Though there has

been good harvest and the rain god is kind enough. But there is a slum in agricultural prices and they are in great difficulty. There are in quandry. They do not know what to do with the products. What have you thought of this problem? How this idea has been introduced in the budget proposals for the year 1979-80 ? A claim has been made and repeatedly made that under the new plan 62% of the plan outlay will be spent on rural development. It is also claimed that all expenditure of rural development is expected to benefit only rural people. May I point out that certain items of expenditure like education, health power and roads will not go to the benefit of the rural people. Only a large chunk of this expenditure of these items is likely to flow back to the urban areas. Entire amount used to spent on rural development is not going to be spent on the rural people so as to become part of the rural income of the people. Any amount that is spent on rural development must be so spent as to see that entire quantum of money expended become part of the rural income. But expenditure on items like the ones I have mentioned likely to flow to urban areas. Therefore, the scheme that is 62% of the total outlay during this plan period is going to be spent on rural development is exaggerated if not offenceful of the scheme and is not so much worthy as it should deserve. Further, the Janatha Party, I am giving a comparative situation, has set apart 40% of its expenditure on rural development, they have advisidly counted such expenditure by excluding of education health, power and roads. This is what you should have done. Unfortunately, this is not what you wish to do. Therefore, the claim of expenditure of 62 % on rural development is not correct, it is exaggerated.

It is also claimed by the spokesman of the Government including the Minister and others that alround development in all parts of the State has taken place during these years.

At page 5 of the Karnataka Draft Five Year Plan, it is stated, as follows.—

> "Economic development in the past two decades has gathered considerable momentum and has resulted in all-round progress in the State".

This is what they have claimed. I would like to draw the attention of the hon. House to figures given in this document at page 196—Composite Index of Development of Different Districts 1960-61, 1971-72, 1974-75 and 1976-77. As a result of the Development activity having taken place, as claimed by the Government, there should have been considerable improvement as indicated in the development of different districts of the State. I would only like to draw

the attention of the House to 11 districts whose development has gone down consistently over these years from 1960-61. Bangalore City which had 218 points in 1960-61 has come down to 206 points in 1976-77. Similarly in the case of Chickmagalur, in 1960-61 it had 120.3 points and it has come down to 84.56 points in 1976-77. This is the situation in respect of 11 districts out of 19 districts in the State. Where do they draw sustenance for the claim that there has been all round development in the State ? It is their own compilation: it is their own figure.

The Hon'ble Minister for Finance has stated in his Budget speech, at page 8, as follows:—

> "I would say with pardonable pride that in the different elements which go into the programme for the weaker sections we are far, ahead, compared to most of the States".

What are the figures we have? The Seventh Finance Commission has given the poverty-line chart of the 15 States, wherein Karnataka is the ninth State in the order of poverty. I do not want to read the entire statistics, but wish to refer to only a few States:

Andhra Pradesh	...	47.85%
Assam	...	32.95%
Bihar	...	64.06%
Gujarat	...	44.88%
Haryana	...	32.24%
Karnataka	...	49.44%
Kerala	...	62.25%
Madhya Pradesh	...	57.50%
Maharashtra	...	43.99%
Orissa	...	67.05%
Punjab	...	21.62%
Rajasthan	...	43.53%
Tamil Nadu	...	60.71%
Uttar Pradesh	...	50.38%
West Bengal	...	62.28%

We are the nineth State in the order of poverty, *i.e.*, the number of people living below the poverty line is nearly 50 per cent. How does the Hon'ble Minister justify that they have made such a tremendous advance in the State, I would like to know. It is good

to remember that the per capita income for the State of Karnataka for the year 1974-75 is 784, and in 1977-78 it is 840. The All-India per capita income is 995 for the year 1974-75 at current prices. So, we are the second poorest State. The first rank may go to Orissa and the next would be Karnataka. This is the position to which we have been reduced as a result of all-round development that has taken place in the State of Karnataka. I do not want to further comment on this because the facts speak for themselves—the figures that are found and that are given in the Seventh Finance Commission's Report about the poverty-line. Their argument would be that advancement comes in the case of weaker sections of the people. Where do they draw the sustenance for their argument? The only argument would be that they have voted them to power. What about the economic advancement that they have been able to show? The Seventh Finance Commission has given us about Rs. 1,005 crores as assistance with the advice that this money should be spent for specific purposes only. As a result of this, the State Government has Rs. 201 crores per year.

SRI S. M. YAHYA.—I would like the hon. member to refer to the speech of the Hon'ble Chief Minister of Karnataka at the National Development Council about the poverty-line.

SRI A. LAKSHMISAGAR.—But there must be some yard-stick with which they go. They cannot come up with a particular figure and say that is the yard-stick. Even then, they will not be in a position to show the real economic progress that has been made. I do agree that no economic theory is correct wholely; the calculation cannot be wholely correct. There is no point in indulging in arriving at this quantum. Where is the claim sustained as a result of facts and figures? I shall be happy to get a satisfactory reply from the Hon'ble Finance Minister to all these things.

I said that Rs. 1005 crores has been given as assistance to our State over a period of 5 years, and for this year a sum of Rs. 2 1 crores would be the plan out lay from Central resources. If we add to this Central loan Open Market borrowings and outright plan grant which together amount to Rs. 220 crores in 1979-80 the total size of the State Plan for 1979-80 will come to about Rs. 441 crores.

4.00 P.M.

This is entirely due to the Central Government's assistance. Now the Planning Commission of the Government of India has also impressed upon the State Government to raise additional resources to the extent of Rs. 4,000 crores. In my calculation for 16 State

Governments. Karnataka State's shares would be Rs. 250 crores over a period of five years. So, per year, an additional tax effort of Rs. 50 crores has got to be made. If we add the State's contribution of Rs. 50 crores, the total size of the State Plan for 79-80 will come to about Rs. 491 crores; but the budget document shows only Rs. 385.39 crores only as the size of the State's Annual Plan for 79-80. What happened to the remaining Rs. 69 crores which have been received from the Central Government? If you allow an additional tax effort of the State Government for the year 1979-80 as Rs. 30 crores which means there is a shortfall of Rs. 20 crores. Even allowing for this shortfall, there is an unaccounted amount of Rs. 66 crores from the Central Government alone. Obviously, this amount is diverted to non-plan and non-development purposes. Is this the way in which the Central Government monies to be used which are supposed to be spent for development purposes only? Therefore I do not want to elaborate because it is a statement of facts. In my submission there may be a difference of opinion in the matter of few crores this way or that way but the total size of the Plan should have been Rs. 441 crores. Therefore I say that there is something wrong with the use of the funds that flow from the Central Government to the State. It is my conviction, it is my firm belief that all is not well with the finances in the kingdom of SRI DEVARAJ URS. Therefore I demand an enquiry into the finances of the State Government by an Expert Commission which should cover both plan and non plan expenditure and further both revenue and capital expenditure.

Further, there has been continuously growing vacuum of non-developmental expenditure in the State of Karnataka. I do not want to quote the figures, it is continously growing. There has been Corporations, Statutory bodies and other organisations which have come into existence whose definite number I cannot say-it is said, it is in the region of 60-65 such agencies and bodies, over which huge sums of monies are expended every year. It is in this connection that the Union Finance Minister-Sri Charan Singh, drew the attention of the State Government in his letter published in the Hindu of 1st April 1979 He has stated that drawing the Chief Minister's attention to the proliferation of the State and multiplication of agencies that have taken place over the year, Sri Charan Singh has said the growing volume of government expenditure was causing serious concern, a comprehensive review to identify the areas in which the economy can be effected without affecting the growth by impairing efficiency to be carried out. Therefore in the context of growing governmental expenditure and other non-development expenditure in the State, I demand an enquiry into the causes of this

phenomenal growth of government expenditure and non-plan expenditure and non-development expenditure by a Committee of Experts-not bureaucrats, to go into the increasing volume of administrative expenditure and non-developmental expenditure with a comprehensive review to identify the areas in which economy can be effected without impairing the growth and suggest measures of economy so that money so saved be ploughed back for developmental purposes and that non-plan expenditure can be kept under check. It may be recalled at this point that the Central Government has decided to set up similar Commissions to go into the expenditure and suggest measures of economy. Therefore I would suggest that such a Commission or a Committes of Experts may be set up.

Sir, lastly one word more and I am finished.

What strikes an independent student of the budget proposals that are placed before the House in my submission, it is this, that monies are being spent how they are spent, with what objectives the money has been spent, what objectives they have been able to achieve in terms of physical targets, one is not able to get. Therefore there is urgent necessity for an over all picture being looked into in all seriousness and see that a better and a proper management of the resources of the State can be achieved. Thank you Sir.

† ಶ್ರೀ ವಿ ಎ. ಮತ್ತಿಕಟ್ಟಿ (ರೋಣ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಮಂಡಿಸಿದ ೧೯೭೭-೭೮ರ ಸಾಲಿನ ಆಯವ್ಯಯ ಪಟ್ಟಿಯನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ. ಕರ್ನಾಟಕ ಸರ್ಕಾರ ಬಡ ಜನತೆಯ ಅಭಿವೃದ್ಧಿ ಪರವಾಗಿದ್ದು ಅದರಲ್ಲೂ ಹಿಂದುಳಿದ ವರ್ಗದ ಬಡ ಜನಾಂಗದ ಜೀವನದ ಮಟ್ಟವನ್ನು ಎತ್ತರಿಸುವುದರಲ್ಲಿ ಈ ಒಂದು ಆಯವ್ಯಯ ಪೂರಕ ವಾಗಿದೆಯೆಂದು ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಹೇಗೆಂದರೆ ಒಂದು ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚಿಸುವಲ್ಲಿ ಅಥವಾ ಆ ರಾಜ್ಯದ ಜನತೆಯ ಜೀವನದ ಮಟ್ಟವನ್ನು ಎತ್ತರಿಸುವಲ್ಲಿ ಮುಖ್ಯವಾಗಿ ಕೃಷಿಯೇ ಪೂರಕವಾಗಿರತಕ್ಕಂಥಾ ಉದ್ದಿಮೆಗಳಾಗಿವೆ. ಮತ್ತು ಇದಕ್ಕೆ ಅವಶ್ಯವಾಗಿಬೇಕಾಗಿರ ತಕ್ಕಂಥಾ ವಿದ್ಯುತ್ ಮೊದಲಾದವುಗಳಿಗೆ ಹೆಚ್ಚಿನ ಹಣವನ್ನು ಕರ್ನಾಟಕ ಸರ್ಕಾರದ ಆಯವ್ಯಯದಲ್ಲಿ ಕೊಟ್ಟಿರುವು ದಕ್ಕಾಗಿ ನಾನು ಹೃತ್ಪೂರ್ವಕವಾಗಿ ಬೆಂಬಲಿಸಲು ಇಚ್ಛಿಸುತ್ತೇನೆ. ತಮಗೆ ಹೇಳಬೇಕಾದರೆ ಒಟ್ಟು ೪೭೦.೩೯ ಕೋಟಿ ರೂಪಾಯಿಗಳಲ್ಲಿ ೫೧.೯೦ ಕೋಟಿ ರೂಪಾಯಿಗಳಷ್ಟು ಕೇವಲ ಒಕ್ಕಲುತನಕ್ಕಾಗಿ ಕೊಟ್ಟಿದೆ ಮತ್ತು ನೀರಾವರಿ ಮತ್ತು ವಿದ್ಯುತ್‌ಗೋಸ್ಕರ ೧೭೮.೯೫ ಕೋಟಿ ರೂಪಾಯಿಗಳನ್ನು ಇದರಲ್ಲಿ ಅರ್ಧಕ್ಕಿಂತ ಜಾಸ್ತಿ ಹಣವನ್ನು ಇದಕ್ಕಾಗಿ ಕರ್ನಾಟಕ ಸರ್ಕಾರ ಖರ್ಚು ಮಾಡುತ್ತಾ ಇರುವುದನ್ನು ನೋಡಿದರೆ ಸಾಮಾನ್ಯರ ಪ್ರಗತಿಯಲ್ಲೂ ಅದರಲ್ಲೂ ಹಳ್ಳಿಗಾಡಿನ ಜನತೆಯ ಪ್ರಗತಿಯಲ್ಲಿ ಹೆಚ್ಚು ವಿಶ್ವಾಸ ಇಟ್ಟಿದ್ದಾರೆ ಎಂದು ನಂಬಬೇಕಾಗಿದೆ. ಕರ್ನಾಟಕ ರಾಜ್ಯ ಸರ್ಕಾರವು ೧೯೭೨ ರ ಮೊದಲು ಯಾವರೀತಿ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಅಶಕ್ತರಾಗಿದ್ದು ತದನಂತರ ೧೯೭೨ ರ ನಂತರವೂ ಅಂದರೆ ಪುನಃ ಶ್ರೀಮಾನ್ ದೇವರಾಜ್ ಅರಸ್‌ರವರ ನೇತೃತ್ವದಲ್ಲಿ ಬಂದಂಥಾ ಸರ್ಕಾರ ಈಗ ಏನು ಇದೆ ಈ ಸರ್ಕಾರವೂ ಕೂಡ ಹೆಚ್ಚು ಹೆಚ್ಚು ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಆ ಹಣವನ್ನು ದೇಶದ ಪ್ರಗತಿಗಾಗಿ ವ್ಯಾಪಕವಾದ ರೀತಿಯಲ್ಲಿ ಖರ್ಚು ಮಾಡಿ ದೇಶದ ಪ್ರಗತಿಯನ್ನು ಸಾಧಿಸುವುದರಲ್ಲಿ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ನಿನ್ನೆ ದಿವಸ ಈ ಮನೆಯ ಹಿರಿಯ ಸಾಸ್ಕೃತಿಕ ವಿರೋಧಪಕ್ಷದ ಸದಸ್ಯರಾದ ಶ್ರೀ ರಾಚಪ್ಪ ಖರ್ಗೆರವರು ದೇಶದ ಬಡ ತನದ ಬಗ್ಗೆ ಮತ್ತು ಲಂಚಗುಳಿತನದ ಬಗ್ಗೆ ಹಲವಾರು ಮಾತುಗಳನ್ನು ಹೇಳಿದರು. ಇವನ್ನೊಂದು ಲಂಚ

ಗುಳಿತನ ಇರಬಾರದು ಎಂದು ಕಟ್ಟುನಿಟ್ಟಾಗಿ ನಾವು ಎಲ್ಲರೂ ಕೂಡ ಇಚ್ಛಿಸುತ್ತೇವೆ. ಆದರೆ ಲಂಚದ ಮೂಲವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಹಿರಿಯ ಸದಸ್ಯರು ದಾರಿ ತಪ್ಪಿದ್ದಾರೆ ಎಂದು ನಾನು ಹೇಳಲು ಇಚ್ಛಿಸುತ್ತೇನೆ. ಲಂಚಗುಳಿತನ ಸಮಾಜದ ವ್ಯವಸ್ಥೆಯ ನ್ಯೂನತೆಗಳಲ್ಲಿ ಒಂದಾಗಿದೆ. ಈ ದೇಶದಲ್ಲಿ ಈಗ ಇರತಕ್ಕಂಥಾ ಆರ್ಥಿಕ ಸಾಮಾಜಿಕ ವ್ಯವಸ್ಥೆ ಏನು ಇದೆ ಈ ವ್ಯವಸ್ಥೆಯನ್ನು ಒಂದು ತರಹ ಅಭದ್ರವಾದ ವ್ಯವಸ್ಥೆಯನ್ನಾಗಿ ಇಂದು ಇಟ್ಟುಕೊಂಡಿದ್ದೇವೆ.

ಇಂಥಹ ಅಭದ್ರವಾದ ಸಮಾಜದ ವ್ಯವಸ್ಥೆಯಲ್ಲಿ ನಾಳಿನ ಭದ್ರತೆಯ ಸಲುವಾಗಿ ಹಲವಾರು ಜನ ಯೋಚಿಸುವಂಥ ನಿರೂಪಣೆ ಇರುತ್ತದೆ. ಲಂಚಕ್ಕೆ ಬಹಳ ಜನ ಒಳಗಾಗುತ್ತಿದ್ದಾರೆ. ಇದನ್ನು ನಿರ್ಮೂಲ ಪಡಿಸುವ ವಿಚಾರದಲ್ಲಿ ಕೇವಲ ಮಂತ್ರಿಗಳಿಗೆ ರಾಜಕಾರಣಿಗಳಿಗೆ ಶಾಸಕರ ಮೇಲೆ ಹೆಚ್ಚು ಜವಾಬ್ದಾರಿಯನ್ನು ಹೊರಿಸುವುದು ಸರಿಯಲ್ಲ. ಇದರ ಜೊತೆಗೆ ಸಮಾಜದ ಇತರರು, ಅಧಿಕಾರಿಗಳು ಪ್ರಮುಖರು ಎಲ್ಲರೂ ಇದಕ್ಕೆ ಕಾರಣರಾಗಬೇಕು. ಅವರೆಲ್ಲರೂ ಪ್ರಾಮಾಣಿಕ ಪ್ರಯತ್ನ ಪಟ್ಟಾಗ ಮಾತ್ರ ಮತ್ತು ಸಮಾಜ ಈ ದಿಸೆಯಲ್ಲಿ ಬದಲಾವಣೆಯಾದಾಗ ಮಾತ್ರ ಲಂಚಗುಳಿತನವನ್ನು ಸರ್ವತೋಮುಖವಾಗಿ ನಿರ್ಮೂಲನ ಮಾಡಬಹುದು, ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಮ್ಮ ದೇಶದ ರಿಸರ್ವ್‌ಬ್ಯಾಂಕಿನ ಬಗ್ಗೆ ನಮ್ಮ ಹಿರಿಯ ಸದಸ್ಯರಾದ ರಾಜಶೇಖರನ್ ಅವರು ಹೇಳಿದ್ದಾರೆ. ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟೆ, ಕೇಂದ್ರದಲ್ಲಿ ಅವರದೇ ಸರ್ಕಾರ ಇದೆ, ರಾಷ್ಟ್ರೀಕೃತ ಬ್ಯಾಂಕುಗಳು ಯಾವ ರೀತಿಯಲ್ಲಿ ಬಡವರಿಗೆ ಸಾಲವನ್ನು ಕೊಡುವ ವಿಚಾರದಲ್ಲಿ ನಡೆಯುತ್ತಿವೆ ಎನ್ನುವುದೂ ಅವರಿಗೆ ಗೊತ್ತಿದೆ. ಹಳ್ಳಿಗಾಡಿನ ರೈತರಿಗೆ, ಹಿಂದುಳಿದವರಿಗೆ ಯಾವ ರೀತಿಯಿಂದ ಈ ಬ್ಯಾಂಕುಗಳವರು ಸಹಾಯ ಮಾಡುತ್ತಿದ್ದಾರೆನ್ನುವುದನ್ನು ಮಾನ್ಯ ಸದಸ್ಯರುಗಳು ತಿಳಿದುಕೊಂಡಿರಬಹುದು. ಕರ್ನಾಟಕ ಸರ್ಕಾರದವರು ಡಿ. ಐ. ಆರ್. ಲೋನ್ಸ್ ನ್ನು ಯಾರು ಬಡವರು ಇದ್ದಾರೆ, ಅಂಥವರಿಗೆ ಕುರಿ, ಕೋಳಿ ಸಾಕುವುದಕ್ಕೆ, ಸಣ್ಣ ವ್ಯಾಪಾರ ಮಾಡುವವರಿಗೆ, ಎರಡು ಸಾವಿರ ರೂಪಾಯಿಗಳವರೆಗೆ ಕೊಡಬಹುದು ಎನ್ನುವ ಒಂದು ಅವಕಾಶವನ್ನು ಮಾಡಿದ್ದಾರೆ. ಇದರ ಬಗ್ಗೆ ಕೇಂದ್ರದವರ ನಿರ್ದೇಶನ ಇದ್ದಾಗ್ಯೂ, ರಾಜ್ಯಸರ್ಕಾರದವರ ಆದೇಶ ಇದ್ದಾಗ್ಯೂ ಬ್ಯಾಂಕುಗಳವರು ಎಷ್ಟು ಜನಕ್ಕೆ ಈ ಒಂದು ಸಹಾಯವನ್ನು ಮಾಡಿದ್ದಾರೆ ? ನನಗೆ ತಿಳಿದ ಮಟ್ಟಿಗೆ ಕೇವಲ ಎರಡು ಪರ್ಸೆಂಟ್ ಜನಕ್ಕೆ ಮಾತ್ರ ಇದರ ಸಹಾಯ ದೊರೆತಿದೆ. ಸಣ್ಣ ಹಿಡುವಳಿದಾರರಿಗೆ, ಸಣ್ಣ ವರ್ತಕರಿಗೆ ಈ ಬ್ಯಾಂಕುಗಳವರು ಸಾಲ ಕೊಡುತ್ತಿಲ್ಲ. ಆದ್ದರಿಂದ ಮಾನ್ಯಸದಸ್ಯರುಗಳು ಕೇಂದ್ರದ ಮೇಲೆ ಒತ್ತಾಯ ತಂದು ಈ ಸಣ್ಣ ಹಿಡುವಳಿದಾರರಿಗೆ, ಮತ್ತು ಸಣ್ಣ ವರ್ತಕರಿಗೆ ಸಾಲ ಕೊಡುವ ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ವಿನಂತಿ ಮಾಡುತ್ತೇನೆ.

ಇನ್ನೂ ಸರ್ವ ವಸ್ತುಗಳ ವಿತರಣೆಯ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಈ ಸಭೆಯಲ್ಲಿ ನಾನು ಗಮನಿಸಿದಾಗ, ಬೆಂಗಳೂರಿನಲ್ಲಿ ಸೀಮೆ ಎಣ್ಣೆ ಇಲ್ಲದಿದ್ದರೆ ಗದ್ದಲವಾಗುತ್ತದೆ, ಇಲ್ಲಿರುವ ಸದಸ್ಯರು ಸಭೆಯಲ್ಲಿ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತಾರೆ. ಆದರೆ, ಕರ್ನಾಟಕ ರಾಜ್ಯದ ಮುಕ್ಕೋಟಿ ಜನತೆಯ ಆಗು ಹೋಗುಗಳ ಬಗ್ಗೆ ಇಲ್ಲಿ ಸಮಯವನ್ನು ವ್ಯಯ ಮಾಡುತ್ತಿಲ್ಲ ಎಂಬುದನ್ನು ನೋಡಿ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಸೊಳ್ಳೆಯ ಕಡಿತಕ್ಕಿಂತ, ನೀರಿನ ಸಮಸ್ಯೆಗಿಂತ ಉಜ್ವಲ ಸಮಸ್ಯೆಗಳು ರಾಜ್ಯದಲ್ಲಿದ್ದು, ಅಂಥ ಸಮಸ್ಯೆಗಳ ಕಡೆಗೆ ಸದಸ್ಯರುಗಳು ಹೆಚ್ಚಿನ ಕಾಳಜಿಯನ್ನು ವಹಿಸಲಿ ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಸಾಮಾನ್ಯ ಸಮಸ್ಯೆಗಳಿಗೆ ನೇರವಾಗಿ ಮಂತ್ರಿಗಳ ಹತ್ತಿರ ಹೋಗಿ, ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಹೋಗಿ ವಿಚಾರ ವಿನಿಮಯ ಮಾಡಬಹುದು ಎಂದು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಣ್ಣ ಸಣ್ಣ ಸಮಸ್ಯೆಗಳಿಗೆ ಸಭೆಯ ಸಮಯವನ್ನು ವ್ಯಯ ಮಾಡುವುದು ಸರಿಯಲ್ಲ.

ನಮ್ಮ ಸರ್ಕಾರ ಮಾಡಿದ ಕೆಲವು ಕೆಲಸಗಳ ಬಗ್ಗೆ ನಾನು ಇಲ್ಲಿ ಹೇಳುವುದಕ್ಕೆ ಸಭೆಯ ಸ್ವಲ್ಪ ಕಾಲವನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಲಕ್ಷ್ಮೀ ಸಾಗರ್ ಅವರು ಸರ್ಕಾರದವರು ಎಂಪ್ಲಾಯ್‌ಮೆಂಟ್ ಅಪರ್ಚುನಿಟೀವ್ ಸ್ಕೀಂನ್ನು ತಂದು ಜನರನ್ನು ಸರ್ಕಾರವನ್ನು ಅವಲಂಬಿಸಿರುವಂತೆ ಮಾಡುತ್ತಿದ್ದಾರೆಂದು ಹೇಳಿದರು. ಮುಂದುವರಿದು ಅವರು ಜನತೆಯ ಆರ್ಥಿಕ ಉನ್ನತಿಯ ಬಗ್ಗೆ ಸರ್ಕಾರದವರು ಹೆಚ್ಚು ಗಮನ ಕೊಡುತ್ತಿಲ್ಲವೆಂದು ಹೇಳಿದ್ದಾರೆ. ಅಲ್ಲದೆ ಬಡತನವನ್ನು ಹೋಗಲಾಡಿಸಲು ಸಾಕಷ್ಟು ಪ್ರಯತ್ನವನ್ನು ಸರ್ಕಾರ ಮಾಡಿಲ್ಲವೆಂದು ಹೇಳಿದ್ದಾರೆ. ನಮ್ಮ ಸರ್ಕಾರದವರು ಬಡತನವನ್ನು ಹೋಗಲಾಡಿಸಲು

ಪ್ರಮುಖ ಪ್ರಯತ್ನವನ್ನು ಮಾಡಿದ್ದಾಗ್ಯೂ, ಸದಸ್ಯರುಗಳು ನಿರೀಕ್ಷಿಸಿದ ಮಟ್ಟಕ್ಕೆ ನಾವು ಹೋಗದೆ ಇರಬಹುದು, ಆದರೆ ಹೆಚ್ಚಿನ ರೀತಿಯಲ್ಲಿ ಈ ದಿಸೆಯಲ್ಲಿ ನಮ್ಮ ಸರ್ಕಾರದವರು ಪ್ರಯತ್ನ ನಡೆಸಿದ್ದಾರೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಅತ್ಯಂತ ಬರಗಾಲ ಪ್ರದೇಶದಿಂದ ಬಂದಿರತಕ್ಕವನಾದ್ದರಿಂದ ಈ ಎಂಪ್ಲಾಯ್‌ಮೆಂಟ್ ಆಫರ್ಮೇಟೀವ್ ಸ್ಕೀಂ ಬಂದಮೇಲೆ ಹಳ್ಳಿಗಾಡುಗಳಲ್ಲಿ ಪ್ರತಿಶತಃ ಎಷ್ಟು ಜನಕ್ಕೆ ಉಪಯೋಗವಾಗಿದೆ ಎಂದು ನನಗೆ ಚೆನ್ನಾಗಿ ಗೊತ್ತಿದೆ. ನಮ್ಮ ಜನರು ಮಲೆನಾಡು ಪ್ರದೇಶಗಳಿಗೆ ವಲಸೆ ಹೋಗಿ ಮತ್ತೆ ವಳ್ಳಿ ಬಂದಿರುತ್ತಾರೆ. ಇದರಿಂದ ಅವರ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಬಹುದು, ಆದರೆ ಅವರ ಜೀವನ ನಡೆಸಲು ಅನುಕೂಲವಾಗಿದೆ. ಯಾರು ದುಡಿಯುತ್ತಾರೋ ಅವರಿಗೆ ನಾವು ಹಣವನ್ನು ಕೊಡುತ್ತಿದ್ದೇವೆ, ಮತ್ತು ಜನರಿಗೆ ಉದ್ಯೋಗವನ್ನು ಒದಗಿಸುವಂಥ ಒಂದು ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ದುಡಿಯದವನಿಗೆ ನಾವು ದುಡ್ಡು ಕೊಡುತ್ತಿಲ್ಲ. ಶ್ರಮ ವಹಿಸಿ ದುಡಿದಾಗ ಮಾತ್ರ ಕೂಲಿ ರೂಪದಲ್ಲಿ ಜನರಿಗೆ ನಾವು ದುಡ್ಡು ಕೊಡುತ್ತಿದ್ದೇವೆ. ಇದರ ಜೊತೆಗೆ ಸಣ್ಣ ಸಣ್ಣ ಹಳ್ಳಿಗಳಲ್ಲಿ ರಸ್ತೆಗಳನ್ನು ಕಲ್ಪಿಸಲು, ಹರಿಜನರ ಓಣಿಗಳನ್ನು ಸಜ್ಜು ಮಾಡಲು, ಜನತಾ ಮನೆಗಳನ್ನು ಕಟ್ಟಿಸಲು ಪ್ರೈಮರಿ ಸ್ಕೂಲುಗಳನ್ನು ಕಟ್ಟಿಸಲು, ಮತ್ತು ಜನತೆಗೆ ಉಪಯೋಗವಾಗುವಂಥ ಕುಡಿಯುವ ನೀರಿನ ಬಾವಿಗಳನ್ನು ಕೆರೆಗಳನ್ನು ನಾವು ಮಾಡಿಕೊಡುತ್ತಿದ್ದೇವೆ, ಈ ಎಲ್ಲಾ ಯೋಜನೆಗಳನ್ನು ನನ್ನ ತಾಲ್ಲೂಕಿನಲ್ಲಿ ಬಂದಿದ್ದರಿಂದ ನಮ್ಮ ಜನತೆಯ ಪರವಾಗಿ ನನ್ನ ತಾಲ್ಲೂಕಿನ ಪರವಾಗಿ ಸರ್ಕಾರಕ್ಕೆ ತುಂಬು ಮನಸ್ಸಿನಿಂದ ತಮ್ಮ ಮೂಲಕ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಇನ್ನು ನಿರುದ್ಯೋಗ ಪದವೀಧರರಿಗೆ ವೇತನವನ್ನು ತಾವು ಕೊಡುತ್ತಿದ್ದೀರಿ. ಇದನ್ನು ಎಷ್ಟರ ಮಟ್ಟಿಗೆ ಕೊಟ್ಟಿದ್ದಾರೆಂದು ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ್ ಅವರು ಕೇಳಿದರು, ಅವರು ಕೇಳತಕ್ಕದ್ದು ಯೋಗ್ಯವೇ. ನಿರುದ್ಯೋಗ ಸಮಸ್ಯೆಯನ್ನು ಸಂಪೂರ್ಣವಾಗಿ ಹೋಗಲಾಡಿಸಲು ಸಾಧ್ಯವಿಲ್ಲ. ಆದರೆ ಜನರನ್ನು, ನಿರುದ್ಯೋಗಿಗಳನ್ನು ಸ್ವಯಂ ಉದ್ಯೋಗ ಮಾಡಲು, ಅವರು ಸಮಾಜದಲ್ಲಿ ಕರ್ತವ್ಯಮುಖರಾಗಿ ಬಾಳಲು ಮತ್ತು ಇಂಥ ಕಾರ್ಯಕ್ರಮಗಳಲ್ಲಿ ಭಾಗಿಗಳಾಗುವಂತೆ ನಮ್ಮ ಸರ್ಕಾರದವರು ಮಾಡುತ್ತಿದ್ದಾರೆ.

ಇನ್ನು ವೃದ್ಧಾಪ್ಯವೇತನದ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ದಿಕ್ಕು ದೆಸೆಯಿಲ್ಲದೆ ಇರತಕ್ಕ ಜನರಿಗೆ ನಮ್ಮ ಸರ್ಕಾರದವರು ಹಣ ಕೊಡುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಅವರೂ ಸಹ ಸಮಾಜದಲ್ಲಿ ಸಂತೃಪ್ತರಾಗಿ ಜೀವನ ಮಾಡಲು ಒಂದು ವ್ಯವಸ್ಥೆಯು ಸರ್ಕಾರದ ಮೂಲಕ ನಿರ್ಮಾಣವಾಗಿದೆ. ಇದು ಎಲ್ಲರೂ ಸ್ವಾಗತಿಸತಕ್ಕ ವಿಚಾರ. ಮಾನ್ಯ ಸದಸ್ಯರಾದ ರಾಜಶೇಖರನ್ ಅವರು ಮಾತನಾಡುತ್ತಾ ಸಮಾಜವಾದಿ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿಯೂ ಲಂಚಗುಳಿತನ ಇದೆಯೆಂದು ಹೇಳಿದರು. ಇದನ್ನು ಕೇಳಿ ನನಗೆ ಬಹಳ ನೋವಾಯಿತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹಲವಾರು ರಾಷ್ಟ್ರಗಳಲ್ಲಿ ಲಂಚಗುಳಿತನ ಇಲ್ಲದೆ ಇರಬಹುದು, ಆದರೆ ಅವರು ಕಮ್ಯುನಿಷ್ಟ್ ರಾಷ್ಟ್ರವನ್ನು ಉದಾಹರಿಸಿದರು. ಪ್ರಜಾಪ್ರಭುತ್ವ ಇರುವ ರಾಷ್ಟ್ರಗಳಲ್ಲಿ ಅನೇಕ ರೀತಿಯಿಂದ ಪ್ರಗತಿಯನ್ನು ಸಾಧಿಸಿರತಕ್ಕ ರಾಷ್ಟ್ರಗಳು ಇವೆ. ಸಮಾಜವಾದಿ ರಾಷ್ಟ್ರಗಳಲ್ಲಿ ಇವತ್ತು ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡು ಯುರೋಪ್ ಖಂಡದಲ್ಲಿಯೇ ಪ್ರಬಲವಾಗಿರತಕ್ಕ ರಾಷ್ಟ್ರಗಳು ಇವೆ. ಇಂಥ ರಾಷ್ಟ್ರಗಳು ಜಗತ್ತಿಗೆ ಮಾರ್ಗದರ್ಶನ ಮಾಡುವಂತೆ ಇವೆ, ಇವುಗಳನ್ನು ಏಕೆ ಅವರು ಉದಾಹರಿಸಲಿಲ್ಲ ಎಂದು ನಾನು ಕೇಳುತ್ತೇನೆ.

ಭೂಸುಧಾರಣೆ ಕಾಯಿದೆಯ ಬಗ್ಗೆ ಕೆಲವೊಂದು ಮಾತನ್ನು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಗೇಣಿದಾರರಿಂದ ಸುಮಾರು ೭.೫೦ ಲಕ್ಷ ಅರ್ಜಿಗಳು ಬಂದಿದ್ದು ಅದರಲ್ಲಿ ಸುಮಾರು ೪ ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಿದ್ದಾರೆ. ಒಟ್ಟು ಎರಡೂವರೇ ಲಕ್ಷ ಜನರಿಗೆ ಸುಮಾರು ೧೦.೨೭ ಲಕ್ಷ ಎಕರೆ ಭೂಮಿಯನ್ನು ನಮ್ಮ ಸರ್ಕಾರದವರು ಕೊಟ್ಟಿದ್ದಾರೆ. ಇದರ ಜೊತೆಗೆ ಜನತೆಗೆ ಹಲವಾರೂ ತೊಂದರೆಗಳಾಗಿವೆ ಎಂಬುದನ್ನು ನಾನು ಒಪ್ಪುತ್ತೇನೆ. ಗೇಣಿದಾರರಿಗೆ ನಾವು ಭೂ ಮಾಲೀಕತ್ವವನ್ನು ಕೊಟ್ಟಾಗ ಲ್ಯಾಂಡ್‌ಡೆವಲಪ್‌ಮೆಂಟ್ ಬ್ಯಾಂಕುಗಳವರು ಸಾಲ ಕೊಡುತ್ತೇವೆಂದು ಹೇಳಿದ್ದರು. ರಾಜ್ಯದಲ್ಲಿ ಕನಿಷ್ಠಪಕ್ಷ ೧೭೫ ಇಂಥ ಬ್ಯಾಂಕುಗಳು ಇದ್ದು ಅವುಗಳಲ್ಲಿ ೧೨೦ ಬ್ಯಾಂಕುಗಳು ಡಿಫಾಲ್ಟರ್ಸ್ ಆಗಿವೆ. ಆದ್ದರಿಂದ ರೈತರಿಗೆ ಸಾಲ ಕೊಡುವ ವ್ಯವಸ್ಥೆ ಆಗದೆ ಇರುವುದರಿಂದ ರೈತರಿಗೆ ಬಹಳ ತೊಂದರೆಗಳಾಗಿವೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇನ್ನು ಬಡ್ಜೆಟ್ ಬಹಳ ಕಾಂಪ್ರಹೆನ್ಸೀವ್ ಆಗಿರಬೇಕು

ಎಂಬುದನ್ನು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ನಾನು ಇಲ್ಲಿಯವರೆಗೆ ನಮ್ಮ ಸರ್ಕಾರದ ಸಾಧನೆಗಳನ್ನು ಹೇಳಿದೆ. ಇನ್ನು ರೈತರಿಗೆ ಆಗುತ್ತಿರುವ ಕೆಲವೊಂದು ತೊಂದರೆಗಳನ್ನು ಹೇಳುತ್ತೇನೆ. ನಮ್ಮ ಸಹಕಾರಿ ರಂಗದ ಮೂಲಕ ಅಂದರೆ ಲ್ಯಾಂಡ್ ಡೆವೆಲಪ್‌ಮೆಂಟ್ ಬ್ಯಾಂಕ್‌ಗಳ ಮೂಲಕ ಒಕ್ಕಲಿಗರಿಗೆ ಸಾಲ ಕೊಡುತ್ತೇವೆಂದು ಸರ್ಕಾರದವರು ಹೇಳುತ್ತಾರೆ. ಆದರೆ ದೊಡ್ಡ ದೊಡ್ಡ ಹಿಡುವಳಿದಾರರು ಸಾಲ ತೆಗೆದುಕೊಂಡು ಮರು ಪಾವತಿ ಮಾಡದೆ ಡಿಫಾಲ್ಟರ್ಸ್ ಆಗಿರುವ ಕಾರಣ ಬೇರೆಯವರಿಗೆ ಅಲ್ಲಿ ಸಾಲ ಕೊಡದಿರುವಂತಹ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಇಂತಹ ಒಂದು ಪರಿಸ್ಥಿತಿ ಶೇಕಡಾ ೭೦ ರಷ್ಟು ಬ್ಯಾಂಕುಗಳಲ್ಲಿದೆ. ಇನ್ನು ಮುಂದೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳನ್ನು ರೆವ್ಯೂ ಮಾಡಿ ಯಾರು ಹೊಸದಾಗಿ ಸಾಲ ಬೇಕೆಂದು ಅರ್ಜಿಗಳನ್ನು ಕೊಟ್ಟಿದ್ದಾರೆ, ಅಂತಹವರಿಗೆಲ್ಲಾ ಸಾಲ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯಲ್ಲಿ ೧೦-೧೫ ವರ್ಷಗಳಷ್ಟು ಕಾಲ ಕೂಲಿ ಕೆಲಸ ಮಾಡಿದವರನ್ನು ಖಾಯಂ ಮಾಡುತ್ತಿರುವಂತೆ, ಹಳ್ಳಿಗಾಡಿನ ಕಡೆಗಳಲ್ಲಿ ಅನರರಿಯಂ ಎಂದು ೧೫೦ ರೂ.ಗಳನ್ನು ತೆಗೆದುಕೊಂಡು ಕೆಲಸ ಮಾಡುತ್ತಿರುವ ಎಸ್.ಎಂ.ಪಿ. ಡಾಕ್ಟರ್ಸ್ ಇದ್ದಾರೆ, ಇವರನ್ನು ಸಹ ಖಾಯಂ ಮಾಡಬೇಕೆಂದು ಕೇಳಿಕೊಂಡು, ಈ ರಾಜ್ಯದ ಜನತೆಗೆ ಇನ್ನಷ್ಟು ಹೆಚ್ಚಿನ ಪ್ರಗತಿಯಾಗಲಿ, ರೈತರ ಪರಿಸ್ಥಿತಿ ಉತ್ತಮವಾಗಲಿ, ಮುಂದಿನ ವರ್ಷದ ಬಜೆಟ್ ಈ ಸಲದ ಬಜೆಟ್‌ಗಿಂತಲೂ ಪುರೋಗಾಮಿಯಾಗಿರಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†SRI P.A. PAWASHE (Uchagaon).—Sir, I stand to oppose the budget estimates for the year 1979-80. For the last several years, budgets are being presented and huge amounts are spent but in spite of that, this government as well as the previous governments have failed to provide the rural areas with minimum facilities like drinking water, roads, school buildings etc.

A very meagre amount has been provided for the development of border areas. The condition of the roads there is far from satisfactory. No material improvement has been carried out to these roads. A number of buses are plying from the round about areas to Belgaum City but in spite of that. roads are not maintained properly. I request the Government to allot sufficient amounts for the development of these roads. During the rainy season these roads become worse and vehicular traffic is practically stopped. At present, the P.W.D. allots one thousand rupees per K.M and it is not sufficient. Adquate funds should be given. Electrification of Nippani and Khanapur and other villages is totally neglected. Several villages have to be electrified. In spite of several representations, Government is not paying any attention to this. Regarding supply of power to pump sets, the agriculturists round about Belgaum City and border areas, are harassed very much. Certain applicants get power within 8-10 days but certain other applications are kept pending for months together.

As regard drinking water facilities, there are some villages where there are no drinktng water facilities. In the absence of bore wells some alternative arrangement should be made. Several NRW schemes are pending with the Government. The panchayats have

paid 10 per cent contribution. But these works have not been started. I want to know whether this is the case only in respect of burder areas.

The teaching staff provided for Marathi primary schools are not sufficient. Sufficient number of school buildings are not provided.

Regarding irrigation, no new works are taken up and old works are not maintained properly. In Rakaskop village, the bandhera has been badly damaged but till to-day, it has not been repaired.

Some grants are given for the development of Western Ghats by the Central Government, which are divided into Southern zone and Northern zone. The northern zone consists of border areas. Not even a single pie has been spent. Why is this step-motherly treatment given to the border areas? I want to know whether the Government has received any grant and how much amount has been spent for the northern zone.

Officials not knowing Marathi language are being posted in the border areas. I am not speaking of high officers. Gram Sevaks and agricultural extension officers must know the language of the people. If they do not know that language, they will not be able to do their duties properly. As regards Belgaum taluk and border areas, the revenue records are maintained in marathi. Now the government has started to post village accountants who do not know Marathi. Kannada knowing village accountants are being posted. It will be very difficult for an official who does not know Marathi language to work there Goverament seems to be not interested in the development of border areas. The people of border areas have been agitating for merger in Maharashtra. and the Marathi-speaking people have affinity to Maharashtra economically socially and culturally. These people have given their verdict in almost all the elections that they should merge in Maharashtra. In Belguam, we have won the election by a very big margin, So, this Belgaum City and Marathi-speaking border areas should be included and merged in Maharashtra We have to face a step-motherly treatment.

We mus see that this problem which is pending for a long time is solved on sound principles once and for all.

SRI S.M SHEERNALLY CHANDRASHEKAR.—From 1956 these areas are in Karnataka. If they mind, they would have learn Kannada and solved this problem as early as possible. It is very easy.

4–30 P.M.

SRI P.A. PAWASHE—There is no question of learning Kannada. e don't hate Kannada but we are fighting for our right and justice.

Then, Sir, coming to agriculture, I would like to say something. I am sorry to say that no steps have be n taken by the Government to protect the interests of the agriculturists The prices of agricultural commodities are falling with the result the marginal farmers and small holders have been hard hit. Therefore, the Government must take into consideration the cost of production of agricultural commodities and see that proper prices are fixed of the agricultural goods. In the case of factory goods, the prices are fixed by the producer himself but whereas in the case of agricultural goods, it is the purchaser who fixes the prices of various agricultural goods in the market. I once again request the Government to see that interests of the agriculturists are protected.

Then I would like to bring to the notice of this August House that previously the Government of Karnataka had exempted the payment of Stamp Duty on security documents while registering them for the loans advanced by the banks for agricultural purposes ; But, recently the Government has issued a Notification dated 5-1-1979 cancelling this exemption and as a result of which the agriculturists who wishes to borrow loans from the banks have to pay the additional amount of Rs. 85/- per Rs. 1000/-, and this has added to their burden. Already, they have been suffering on account of the fall in prices of agricultural goods and now thay have to pay additional amount of Rs. 85/- per Rs. 1000/- while borrowing the loans from the Banks. I therefore request the Government to consider their problems and see that the exemption given previously is restored.

As regards rates of interest being charged by the banks on the loans, I would like to say something. The Banks are charging very high rates of interest on the loans given to the agriculturists. In Maharashtra, they have reduced the rate of interest on loans given to the agriculturists. I request the Government to see that the rates of interest are reduced here also. In the present circumstances, the agriculturists are not in a position to pay the Agricultural Income Tax. It is an additional burden on them. I request the Government to see that the agriculturists are exempted from the payment of this Agricultural Income Tax.

Then, Sir, I would like to speak about the water rate levied to the agriculturists. In our area, there are two sources from which we

get water. We have got newly constructed Bandaras and also some old tanks in the malnad areas which have been constructed adout 100 or 200 years ago. These tanks are full of silt and their storage capacity has gone down. But, in spite of it, the P.W.D. authorities and the Tahsildar who have been invested with the power of levying the water rates have visited these places and are collecting the water rates from the agriculturists. Even though they are not providing sufficient water to the agriculturists because of silt in these tanks, they are collecting the water rates. While fixing the assessment, they have taken into consideration this water rate also. I request the Government to investigate this matter and see that the water rate is exempted to the agriculturists who are getting the water from the old tanks.

As regards new bandars, I would like to say that they are not maintained properly. There are no channels and if they give water to the agriculturists, they are ready to pay the water rate but if water is not given, they are not ready to pay this water rate. I request the Government to see that new bandars are maintained properly and water is sufficiently and regularly supplied to the agriculturists by the P.W.D. authorities.

As regards transport facilities to the people, I would like to say something. In Belgaum KSRTC Depot, there are no sufficient buses to cater to the demands of the people of that area and those buses which are there are also not in a fit condition. I don't know what the people who are working in the workshop are doing. I had an experience of the conditions of the K.S.R.T.C. buses. One day morning I came to Bangalore from Belgaum and on the same evening, I went to bus-stand to get the bus to Belgaum but I was told that there will be two hours late for the departure of the bus because there was a leakage in the diesel tank. When the bus came to Bangalore in the morning, it is the duty of the concerned persons to attend to the repairs of the bus and see that it is fit for the evening trip. This thing should not happen. To avoid these things, the persons who are working in the Workshops should do their duties properly. They should attend to the repairs of the bus promptly. In Belgaum, the shuttle services have been stopped for want of buses. I request the Government to see that sufficient buses are given to the Belgaum Depot to enable them to run the shuttle buses and put an end to the running of unserviceable buses on the roads. The Hon. Minister for Transport is he e. I would like to mention one thing. An officer in Belgaum has issued a Circular or Order stating that the students are not allowed to use the passes after 7 A.M. I don't know wheather the same rule has been made applicable in all other parts of the State or

only in Belgaum. In this connection, I would like to say that the students who are coming from the nearby villages and who are pass-holders are also attending the night colleges and some of the poor students who cannot buy text books are studying in the Library upto 8 or 9 O'Clock in the night and afterwards, they used to return to their homes. Their difficulties should be taken into consideration. He has issued the arbitrary rule or order with the result the students have been experiencing great hardship. I request the Hon'ble Minister for Transport to look into it and see that such an order is cancelled, and the concerned Officer who has issued such an order should be asked to furnish the explanation about it.

As regards city bus fare, I would like to say that the Government must re-consider the heavy burden that has fallen on the people on account of the increase in bus fares and see that the bus fares are reduced. The private owners have reduced the rates and when that is the case, the Government should also re-consider it and see that something is done. We have no objection if the bus fares are enhanced but without providing facilities, it should not be enhanced. Now, without providing the facilities, it has been increased.

Coming to land reforms, I would like to submit that the Land Reforms Act has been enacted for the purpose of conferring ownership on the tenants and secondly, to distribute the surplus land to the people.

In Belgaum Taluka, only 666 acres of land has been declared as surplus lands and out of that, only 42 acres have been given to the people for cultivation. Here I would like to give one example. There is one village called Kudremani. In that village, some surplus lands have been given to the SCs/STs people. Some amount has been given by the Government for the development of those lands but the B.D.O. has decided that these lands cannot be brought under cultivation and he has returned the amount. Only in paper we are telling that so much of land is given to SCs/STs, but the question is whether we have given that much of land to them No purpose is served if we simply say it in paper. We should see that actually they get the lands.

Regarding the working of the Tribunals in Belgaum Taluk, I would like to say that even though 3 M.L.A.s of our party are there, none of us has been included in those land tribunals. Some corrupt practices are being followed there. I therefore request the Government to see that justice is done to the tenants and the corruption in the land tribunals is stopped.

With these words, I thank the Chair and conclude.

† ಶ್ರೀ ಗಟ್ಟಿ ಚಂದ್ರಶೇಖರ್ (ಗುಬ್ಬಿ).— ಸನ್ಮಾನ್ಯ ಅಧ್ಯಕ್ಷರೇ, ೧೯ನೇ ಮಾರ್ಚ್ ೧೯೭೭ನೇ ಇಸವಿಯಂದು ಮಟಮಟ ಮಧ್ಯಾಹ್ನ ಎರಡೂವರೆ ಗಂಟೆ ಉರಿ ಬಿಸಿಲಿನಲ್ಲಿ ೫೨ ಪುಟಗಳನ್ನುಳ್ಳ ಆಯವ್ಯಯವನ್ನು ನಮ್ಮ ಮಾನ್ಯ ಅರ್ಥ ಸಚಿವರು ಶಾಂತಚಿತ್ತದಿಂದ ನಮ್ಮ ಈ ಸಭೆಯ ಮುಂದೆ ಮಂಡಿಸಿದ್ದಾರೆ. ಇದನ್ನು ನಾನು ಹೆಮ್ಮೆಯಿಂದ ಸ್ವಾಗತಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಎಲ್ಲಕ್ಕಿಂತ ಹೆಚ್ಚಾಗಿ ಈ ದಿನ ಮಾತನಾಡಲು ನನಗೆ ಬಹಳ ಸಂತೋಷ.

> ‘‘ ರವಿ ಆಕಾಶಕೆ ಭೂಷಣಂ ಗಗನಕೆ ಚಂದ್ರಂ ಭೂಷಣಂ
> ಸತಿಗೆ ಪಾತಿವ್ರ್ಯತ್ಯವೇ ಭೂಷಣಂ ವಿಧಾನಸಭೆಗೆ ವಿರೋಧಪಕ್ಷವೇ ಭೂಷಣಂ’’

ಇವತ್ತು ವಿರೋಧಪಕ್ಷದವರೆಲ್ಲರೂ ಇದ್ದಾರೆ. ಹೋದಸಾರಿ ಅವರಾಗಿಯೋ ಆಚೆಗೆ ಹೋದರೋ, ಅಥವಾ ಅಧ್ಯಕ್ಷರೇ ಅವರನ್ನು ಆಚೆಗೆ ಕಳಿಸಿದರೋ ಅಂತೂ ಆ ಕಡೆ ನೋಡಿದರೆ ಬೇಜಾರಾಗುತ್ತಿತ್ತು, ಆ ಕಡೆ ಸ್ಮಶಾನಸದೃಶವಾಗಿತ್ತು. ಇವತ್ತು ಬಹಳ ಕಳೆಯಿಂದ ಇದ್ದಾರೆ, ಅವರಲ್ಲೂ ಪರಿವರ್ತನೆಯಾಗಿದೆ. ಮುಂದೆ ಏನಾಗುತ್ತದೋ ನಾವು ಸಹಕರಿಸಿಕೊಂಡು ಹೋಗಬೇಕು ಎಂದು ಇದ್ದಾರೆ, ಇದು ಒಳ್ಳೆಯ ಶುಭ ಸೂಚನೆ, ಇದು ಬಹಳ ಒಳ್ಳೆಯದು. ಕಳೆದ ಅಧಿವೇಶನದ ನಂತರ, ನಾವು ಮೊದಲನೇ ಸಾರ್ತಿ ಮಾತನಾಡಿದ ಮೇಲೆ ಶಾಸಕರಿಗೆ ಅವರ ಒಂದು ಸ್ಥಾನಮಾನಕ್ಕೆ ಸರಿಯಾದಂಥ ಸಂಭಾವನೆ, ಪೆನ್‌ಷನ್, ಅದರಲ್ಲಿ ನಾನೂ ಸ್ವಲ್ಪ ಭಾಗಿಯಾದುದರಿಂದ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಧೈರ್ಯವಾಗಿ ತಮ್ಮೆಲ್ಲರ ಸಹಕಾರದಿಂದ ಈ ಸಭೆಯಲ್ಲಿ ತಂದು, ಅದು ಪಾಸಾಗಿ ಈಗಾಗಲೇ ಅದರ ದುಡ್ಡು ಎಲ್ಲರ ಲೆಕ್ಕಕ್ಕೂ ಹೋಗಿದೆ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಕೃತಜ್ಞತೆಯನ್ನು ಸಮರ್ಪಿಸುತ್ತೇನೆ. ಈ ನಮ್ಮ ಬಡ್ಜೆಟ್ ಭಾಷಣವನ್ನು ನೋಡಿದರೆ ನಮಗೆಲ್ಲರಿಗೂ ಅದರಲ್ಲೂ ನಮ್ಮ ಪಕ್ಷದವರಿಗೆ ಹೆಮ್ಮೆಯಾಗುತ್ತದೆ ೫ ವರ್ಷಗಳಿಂದ ಏನು ಕೆಲಸಮಾಡಿದ್ದೇವೆ, ನಭೂತೋ ನಭವಿಷ್ಯತಿ. ಇವತ್ತು ಮಹಾತ್ಮಾ ಗಾಂಧಿಯವರು ಜೀವಂತವಾಗಿದ್ದರೆ, ನಾನು ಏನು ರಾಮರಾಜ್ಯದ ಕನಸು ಕಾಣುತ್ತಿದ್ದೆ ಅದು ಈ ಕರ್ನಾಟಕ ರಾಜ್ಯದಲ್ಲಿ ಶ್ರೀ ದೇವರಾಜ ಅರಸರ ಮುಖಂಡತ್ವದಲ್ಲಿ ನನಸಾಗುತ್ತಿದೆ ಎಂದು ಸಂತೋಷಪಡುತ್ತಿದ್ದರು. ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಮಾನ್ಯ ಪಟೇಲರು ಸಭೆಯಲ್ಲಿಲ್ಲ. ನಮ್ಮ ಮಾನ್ಯ ಅರ್ಥಸಚಿವರು ೧೦೦ ನಿಮಿಷಗಳ ಕಾಲ ತಮ್ಮ ಬಡ್ಜೆಟ್ ಭಾಷಣವನ್ನು ಮಾಡಿದರು. ಮಾನ್ಯ ವಿರೋಧ ಪಕ್ಷದ ನಾಯಕರು ೧೮೦ ನಿಮಿಷ, ಮಾನ್ಯ ಜೆ. ಹೆಚ್. ಪಟೇಲರು ೫೬ ನಿಮಿಷ, ಮಾನ್ಯ ಗಂಗಾಧರ್‌ರವರು ೪೫ ನಿಮಿಷಗಳ ಕಾಲ ಅಂಕೆಸಂಖ್ಯೆಗಳನ್ನು ಕೊಟ್ಟು ಟೀಕೆ ಮಾಡಿದರು; ಒಂದಾದರೂ ಒಳ್ಳೆಯ ಮಾತನ್ನು ಹೇಳಲಿಲ್ಲ. ಅದು ಅವರ ಚಾಯಮಾನಕ್ಕೇ ಬಂದಿಲ್ಲ ಅವರ ಸ್ಥಾನ, ಗೌರವಕ್ಕೆ ಸರಿಯಾಗಿ ಅವರು ವರ್ತಿಸಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್ :—ನಾವೆಲ್ಲಾ ಟೀಕಾಚಾರ್ಯರಾದರೆ ಅವರೆಲ್ಲಾ ವಂದಿ ಮಾಗಧರು.

ಶ್ರೀ ಗಟ್ಟಿ ಚಂದ್ರಶೇಖರ್ :—ಹಿಂದೆ ನಾವು ನಿಮಗಿಂತ ಹೆಚ್ಚಾಗಿ ಟೀಕೆ ಮಾಡಿದ್ದೇವೆ. ಹಿಂದೆ ನಾವು ಸಭೆ ಚೆನ್ನಾಗಿರಬೇಕು, ಸರಿಯಾಗಿರಬೇಕು ಎಂದು ಟೀಕೆ ಮಾಡುತ್ತಿದ್ದೆವು. ಆದರೆ ಇವತ್ತು ನೀವು ಸಭೆಯನ್ನು ಕೆಡಿಸಬೇಕು ಎಂದು ಟೀಕೆ ಮಾಡುತ್ತಿದ್ದೀರಿ ನಿಮಗಿಂತ ಕಠಿಣವಾಗಿ ನಾವು ಟೀಕೆ ಮಾಡಿದ್ದೇವೆ. ಅವರು ಏನೂ ಮಾಡಲಿಲ್ಲ ಎಂದು ಹೇಳಿದರು. ನಾನು ಒಂದು ವಿಚಾರವನ್ನು ಅವರ ಗಮನಕ್ಕೆ ತರುತ್ತೇನೆ. ೪ ವರ್ಷಗಳ ಹಿಂದೆ ಇದೇ ವಿಧಾನಸಭೆಯಲ್ಲಿ ಇದೇ ಸ್ಥಾನದಿಂದ ತುಮಕೂರು ಜಿಲ್ಲೆಗೆ ಹೇಮಾವತಿ ನದಿ ನೀರನ್ನು ತರದೇ ಹೋದರೆ ತುಮಕೂರು ಜಿಲ್ಲೆಯ ೧೧ಜನ ಶಾಸಕರು ರಾಜಿನಾಮೆ ಕೊಡುತ್ತೇವೆ ಎಂದು ಹೇಳಿದೆವು ಮಾರನೇ ದಿವಸವೇ ಮಾನ್ಯ ಮುಖ್ಯ ಮಂತ್ರಿಗಳು ನಮ್ಮನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಮಾತನಾಡಿದರು. ನಮ್ಮ ಗುಬ್ಬಿಯಲ್ಲಿ ಸಬ್ ಡಿವಿಜನ್ ಓಪನ್ ಆಗಿ ಈಗ ಆ ಕಾರ್ಯ ಪ್ರಾರಂಭವಾಗಿದೆ. ಇದರಿಂದ ತುಮಕೂರು ಜಿಲ್ಲೆಯಲ್ಲಿ ಗುಬ್ಬಿ ತಾಲ್ಲೂಕು, ತಿಪಟೂರು ತಾಲ್ಲೂಕು ಮತ್ತು ತುರುವೇಕೆರೆ ತಾಲ್ಲೂಕು— ಈ ಮೂರು ತಾಲ್ಲೂಕು ಸೇರಿ ಒಟ್ಟು ೧ ಲಕ್ಷ ೨೨ ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಗುಬ್ಬಿ ತಾಲ್ಲೂಕು ಒಂದರಲ್ಲೇ ೬೫ ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಇದು ೧೯೮೩ನೇ ಇಸವಿಗೆ ಮುಗಿದು, ತುಮಕೂರು ಜಿಲ್ಲೆಯ ೧ ಲಕ್ಷ ೨೨ ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಅಂದಮೇಲೆ ಏನೂ ಮಾಡಿಲ್ಲ ಎಂದು ಆ ಕಡೆಯವರು ಹೇಳಿದರೆ ಈ ೧ ಲಕ್ಷ ೨೨ಸಾವಿರ ಎಕರೆಗೆ ನೀರು ಕೊಟ್ಟವರು ಯಾರು. ಏನೂ ಮಾಡಿಲ್ಲ ಎಂದು ಏಕೆ ಹೇಳುತ್ತೀರಿ. ನಿಮ್ಮ ಕಡೆ ಒಳ್ಳೆಯ ಸ್ಟ್ಯಾಟಿಸ್ಟೀಷಿಯನ್ಸ್ ಇದ್ದಾರೆ; ಅಂಕೆಸಂಖ್ಯೆಗಳನ್ನು ಚೆನ್ನಾಗಿ ಕಲೆಕ್ಟ್ ಮಾಡುತ್ತಾರೆ. ಆ ಕಡೆ

ಯವರಿಗೆ ಮೊದಲಿಂದ ಅದೇ ರೂಢಿಯಾಗಿದೆ. ಈ ಕಡೆ ಕೂತಂ ಕೆಲಸಮಾಡಿ ಅದನ್ನು ತೋರಿಸಿ, ಬೈಸಿಕೊಂಡು ರೂಢಿ ಇಲ್ಲ. ಮೊದಲಿನಿಂದ ಲೆಕ್ಕಹಾಕಿ ಹೇಳಿ ಹೇಳಿ ಜನ ನಂಬದೇ ಇರತಕ್ಕ ಪರಿಸ್ಥಿತಿಗೆ ಬಂದಿದೆ. ಗಬ್ಬಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸ್ಥಳದಲ್ಲೇ ೧೫ ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ, ಸೇತುವೆ ಕೆಲಸ ನಡೆಯುತ್ತಿದೆ, ಆ ಸೇತುವೆಯನ್ನು ನೋಡಿ ಜನ ಹೆಮ್ಮೆಯಿಂದ ನಮಗೆ ಓಟು ಕೊಡುತ್ತಾರೆ. ೧೯೮೩ನೇ ಇಸವಿಯಷ್ಟು ಹೊತ್ತಿಗೆ ಅಂದರೆ ಮುಂದಿನ ಚುನಾವಣೆ ವೇಳೆಗೆ ಹೇಮಾವತಿ ನದಿ ನೀರಿನ ಕೆಲಸ ಮುಗಿಯುತ್ತದೆ, ಈ ಸೇತುವೆಯ ಕೆಲಸ ಮುಗಿಯುತ್ತದೆ, ನೀರು ಧಾರಾಕಾರವಾಗಿ ಬರುತ್ತಾ ಇರುತ್ತದೆ. ನಿಮ್ಮ ಕಡೆಯ ದೊಡ್ಡ ದೊಡ್ಡ ಮುಖಂಡರುಗಳೆಲ್ಲಾ ನಾವು ಏನೂ ಮಾಡಲಿಲ್ಲ ಎಂದು ಹೇಳಿದರು. ಅದನ್ನು ಜನ ನಂಬಲಿಲ್ಲ. ಕರ್ನಾಟಕದ ಜನ ಬುದ್ಧಿವಂತರು. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ೧೯೨೪ನೇ ಇಸವಿಯಲ್ಲಿ ಮಹಾತ್ಮಾಗಾಂಧಿಯವರು ಬೆಳಗಾಂಗೆ ಕಾಂಗ್ರೆಸ್ ಅಧಿವೇಶನಕ್ಕೆ ಬಂದಾಗ ಮಧ್ಯೆ ಬರತಕ್ಕ ದಾರಿಯಲ್ಲಿ ಕಾರು ಕೆಟ್ಟುಹೋಯಿತು. ಅವರ ಜೊತೆಯಲ್ಲಿ ಇಬ್ಬರು ಪ್ರೆಸ್‌ನವರೂ ಪ್ರಯಾಣ ಮಾಡುತ್ತಿದ್ದರು. ಅವರ ಹೆಸರು ನನಗೆ ಜ್ಞಾಪಕವಿಲ್ಲ. ಮಹಾತ್ಮಾಗಾಂಧಿಯವರು ಕಣ್ಣು ಮುಚ್ಚಿಕೊಂಡು ನಿದ್ರೆಮಾಡುತ್ತಿದ್ದರು. ಅವರ ಕಾರ್ ಹತ್ತಿರ ಒಬ್ಬ ಸನ್ಯಾಸಿ ಕೊರಳಿಗೆ ಹಾವನ್ನು ಹಾಕಿಕೊಂಡು ಬಂದು ನೋಡುತ್ತಿದ್ದ; ಸನ್ಯಾಸಿಯನ್ನು ನೋಡಿ ಪ್ರೆಸ್‌ನವರು ಭಯಪಡುತ್ತಿದ್ದರು. ಆಗ ಮಹಾತ್ಮಾಗಾಂಧಿಯವರು ಕಣ್ಣು ತೆಗೆದು, Don't fear. He don't harm. He is a man from Karnataka. ಎಂದು ೧೯೨೪ನೇ ಇಸವಿಯಲ್ಲಿ ಹೇಳಿದ್ದಾರೆ. ಅಂತಹ ಬುದ್ಧಿವಂತ ಜನ ನಮ್ಮ ಕರ್ನಾಟಕದ ಜನ. ಆ ಕಡೆ ಎಲ್ಲರೂ ನಮ್ಮನ್ನು ಬೀಳಿಸೋಣ ಎಂದು ನಿಂತರು ಆಮೇಲೆ ಅವರೇ ಬಿದ್ದರು. ನಮ್ಮದೇ ಗೆಲ್ಲುವ ಪರಿಸ್ಥಿತಿ ಇದೆ. ಎಂತಹ ತಪ್ಪು ಕೆಲಸ ಮಾಡಿದ್ದೇವೆ ಎಂದು ಆ ಕಡೆ ಜನ ಈಗ ಪಶ್ಚಾತ್ತಾಪಪಡುತ್ತಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್ :—ಮಹಾತ್ಮಾಗಾಂಧಿಯವರು ಹೇಳಿದ್ದು ಎಲ್ಲಿದೆ ?

ಶ್ರೀ ಗಟ್ಟಿ ಚಂದ್ರಶೇಖರ್ :—ಅವರ ಆಟೋಬೈಯಾಗ್ರಫಿಯಲ್ಲಿದೆ, ಅದು ನನ್ನ ಹತ್ತಿರ ಇದೆ. ಬೇಕಾದರೆ ಬನ್ನಿ ನಾನು ತೋರಿಸುತ್ತೇನೆ. ನಾನು ಯಾವುದೂ ಸುಳ್ಳು ಹೇಳುವುದಿಲ್ಲ. ನಿಮಗೆ ಗೊತ್ತಲ್ಲ, ನಾವೇನು ಮಾಡುತ್ತೇವೋ ಅದೆಲ್ಲಾ ಇಲ್ಲಿ ಹೇಳಿಬಿಡುವುದೇ. ನಮ್ಮ ಸರ್ಕಾರದವರು ಲಕ್ಷಾಂತರ ಮನೆಗಳನ್ನು ಕೊಟ್ಟಿದ್ದಾರೆ. ಸಾಮಾನ್ಯವಾಗಿ ಮನುಷ್ಯನಿಗೆ ಸಾಯುವಾಗ ನನ್ನ ಗೂಡಿನಲ್ಲಿ ಸಾಯಬೇಕು ಎಂದು ಆಸೆ ಇರುತ್ತದೆ. ಅವನ ಅಭಿಲಾಷೆಯನ್ನು ಈಡೇರಿಸುವುದಕ್ಕಾಗಿ ಇವತ್ತು ಲಕ್ಷಾಂತರ ಮನೆಗಳನ್ನು ಸೈಟುಗಳನ್ನೂ ಸರ್ಕಾರ ಕೊಟ್ಟಿದೆ. ಇವತ್ತು ಯಾವ ಊರಿನಲ್ಲಿ ನೋಡಿದರೂ, ಯಾವ ಹಳ್ಳಿಯಲ್ಲಿ ನೋಡಿದರೂ ರಿಗ್ ವೆಲ್ಸ್ ಇವೆ, ಮಾನ್ಯ ಬಸಪ್ಪನವರಿಗೆ ಗೊತ್ತಿದೆ, ಅವರು ಒಪ್ಪಿಕೊಳ್ಳಬೇಕು. ಒಲ್ಡೇಜ್ ಪೆನ್‌ಷನ್ ಕೊಟ್ಟಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ :—ಹಳ್ಳಿಯಲ್ಲಿ ಹೆಂಡದ ಅಂಗಡಿಗಳೂ ಇವೆ.

ಶ್ರೀ ಗಟ್ಟಿ ಚಂದ್ರಶೇಖರ್ :—ನಿಮಗೆ ಹಳ್ಳಿಯ ವಿಷಯ ಅಷ್ಟಾಗಿ ಗೊತ್ತಿಲ್ಲ. ನೀವು ಪಟ್ಟಣದವರು ನಿಮಗೆ ಕಾರ್ಪೊರೇಷನ್ ವಿಷಯ ಚೆನ್ನಾಗಿ ಗೊತ್ತಿದೆ ಸೊಳ್ಳೆ ಹೊಡೆಯುವುದು ಗೊತ್ತು. ಈ ಸಭೆಯ ೨೨೪ ಜನ ಸದಸ್ಯರ ಪೈಕಿ ೭-೮ ಜನ ಬೆಂಗಳೂರಿನವರು ಬಿಟ್ಟರೆ ಉಳಿದವರೆಲ್ಲಾ ಹಳ್ಳಿಯವರೇ. ಸೊಳ್ಳೆ ಕಾಟದ ಬಗ್ಗೆ ಮಾನ್ಯ ಶ್ರೀಕಂಠಯ್ಯನವರಿಗೆ ಹೇಳುತ್ತಿರುತ್ತಿರಿ ಅವರು ನನಗೆಹೇಳಿ ನಾನು ಸೊಳ್ಳೆ ನಿರ್ಮೂಲಮಾಡುತ್ತೇನೆ ಎಂದು ಹೇಳುತ್ತಾ ಇರುತ್ತಾರೆ, ಇದು ಮುಗಿಯದ ಕೆಲಸ.

ಇನ್ನು ವೃದ್ಧಾಪ್ಯ ವೇತನದ ಬಗ್ಗೆ ಹೇಳುವುದಾದರೆ ನನ್ನ ತಾಲ್ಲೂಕಿನಲ್ಲಿಯೇ ಸುಮಾರು ಒಂದೂವರೆ ಸಾವಿರ ಜನಕ್ಕೆ ಕೊಡಿಸಿದ್ದೇನೆ. ಅದೇ ರೀತಿ ಅಂಗವಿಕಲರಿಗೆ ೬೦೦ ಜನಕ್ಕೆ ನನ್ನ ಒಂದು ತಾಲ್ಲೂಕಿನಲ್ಲಿಯೇ ಕೊಡಲಾಗಿದೆ. ಇದು ಏನು ? ಯಾವ ಕಾಲದಲ್ಲಿತ್ತು ? ಇದು ಶ್ರೀ ರಾಮ ಚಂದ್ರನ ಕಾಲದಲ್ಲಿತ್ತು ಎಲ್ಲಾ ಆಗಿಹೋಯಿತು ಎಂದು ಹೇಳುತ್ತಿದ್ದರು ಆದರೆ ನಾವು ಬಂದ ಮೇಲೆ ಅದನ್ನು ಮಾಡಿ ತೋರಿಸಿದ್ದೇವಲ್ಲಾ... ಇಷ್ಟೆಲ್ಲಾ ಮಾಡಿದರೂ ನೀವು ಏನೂ ಮಾಡಿಲ್ಲ, ಏನೂ ಮಾಡಿಲ್ಲ ಅಂತ ಸುಮ್ಮನೇ ಜನಗಳ ಮುಂದೆ ಹೇಳಿ ಜನಗಳಿಂದ ನಂಬಿಕೆ ಕಳೆದುಕೊಳ್ಳಬೇಕು. ನಂಬಿಕೆ ಉಳಿಸಿಕೊಳ್ಳಿ. ಇವತ್ತಿಗೂ ವಿರೋಧ ಪಕ್ಷದವರು ಪ್ರಜಾಪ್ರಭುತ್ವದಲ್ಲಿ ಇರಬೇಕು. ನೀವು ಇವತ್ತು ಇಲ್ಲದೇ ಇದ್ದರೆ ನಾನು ಮಾತನಾಡುತ್ತಾ ಇರಲಿಲ್ಲ. ಬಾಲು ಒದ್ದರೆ ಸೀದಾ ಹೋಗಬೇಕು. ಅದು ಫೌಲ್ ಗೇಲ್ ಆದರೆ ನಾವು ಒದ್ದು ಗೋಲು ತೋರಿಸುತ್ತೇವೆ. ವಿರೋಧ ಪಕ್ಷದವರೂ ಇರಬೇಕು ಸಂತೋಷ. ಮಾನ್ಯ ಜೆ. ಎಚ್.

ಪಟೇಲ್‌ರವರು ಹೊರಗೆ ಹೊರಟು ಹೋದರು ಅವರು ಬರೀ ಅಂಕಿಸಂಖ್ಯೆಗಳನ್ನೇ ಹೇಳುತ್ತಿದ್ದರು, ಆ ರೀತಿ ಹೇಳುತ್ತಾ ನೀವು ಏನೂ ಮಾಡಿಲ್ಲ ಅಂತ ಅವರು ಹೇಳಿದರಲ್ಲಾ–ಕರ್ನಾಟಕ ಒಂದೇ ದೇಶ–ಹಿಂದೂ ಸ್ಥಾನಕ್ಕೆ ಸಂಬಂಧಪಟ್ಟಿದ್ದು ಅಲ್ಲ ಎನ್ನುವ ತರಹವಲ್ಲಿ ಹೇಳಿದರು. ಅದೇ ತರಹ ಬಾಕಿ ರಾಜ್ಯಗಳೂ ಇದ್ದಾವೆ, ಆ ರಾಜ್ಯಗಳವರೇನೂ ಮಾಡಿದ್ದಾರೆ ಎನ್ನುವ ಬಗ್ಗೆ ತಮಗೆ ನನ್ನ ಹತ್ತಿರ ಕೂಡ ಅಂಕಿ ಸಂಖ್ಯೆಗಳು ಇವೆ ಕೊಡುತ್ತೇನೆ. "Last year the price of rice fall by 4.3 % Jowar 3.6 %, bajra by 12 per cent, cereals in general by 3.9 %, fruit and vegetables by 6.3% raw catton by 11.6%, Oil seeds by 12.1%, edible Oil by 18.5% and Sugar by 23.6 per cent.

The prices of inputs on the other hand have risen by 80 percent for fertilisers, 40 per cent for pesticides and 9 per cent for diesel." ಇದನ್ನು ಹೇಳದೇ, ಇದನ್ನು ಬಿಟ್ಟು ಬಿಡುತ್ತೀರಿ. ಬರೀ ಬಾಲವನ್ನು ಹಿಡಿದುಕೊಳ್ಳುತ್ತೀರಿ ತಲೆ ಏನಾಗಿದೆಯೆಂಬುದನ್ನು ನೋಡಿ. ತಲೆ ಕೆಟ್ಟು ಹಾಳಾಗಿ, ಫಜೀತಿ ಎದ್ದು ಹೋಗಿದೆ. ನಮಗೂ ಸಹ ಸ್ವಲ್ಪ ಸ್ಟ್ಯಾಟಿಸ್‌ಟಿಕ್ಸ್ ಗೊತ್ತಿದೆ ಎಂಬುದಕ್ಕೆ ತಮಗೆ ಹೇಳಿದೆ ಅಷ್ಟೆ.

"at the end of the first year of its work, the Janata Government boasted-or a 33.9 per cent increase in agricultural output and a 14.8 percent increase in foodgrains production over the previous year. But within a year from that these growth figures have crashed to a mere two percent for both agricultural output and food production. And the projected growth rate of 4.7 percent per annum, after making allowance for population growth is one of the lowest among the countries of Asia."

ತಲೆ ಏನಾಗಿದೆಂಬುದನ್ನು ನೋಡದೇ ಬಾಲ ಹಿಡಿದುಕೊಂಡು ಒದ್ದಾಡುತ್ತಿದ್ದೀರಲ್ಲಾ ? ಪಾಪ... ಇದನ್ನು ನೋಡಿ...

ಒಬ್ಬ ಸದಸ್ಯರು ;—ಅಂದರೆ ಅದಕ್ಕಿಂತ ಮುಂದೆ ಹೋಗಿದ್ದೇವೆಂದು ಹೇಳುತ್ತೀರೋ ?

ಶ್ರೀ ಗಟ್ಟಿ ಚಂದ್ರಶೇಖರ್:—ಹೌದು...ಒಬ್ಬರ ಹಿಂದೆ·ಒಬ್ಬರು ಹೋಗುತ್ತಾರೆ ಯಾರು ಇರುವುದಿಲ್ಲ ಆ ಮೇಲೆ ಮುಂದು ಓದಿ ಹೇಳುತ್ತೇನೆ ಸ್ವಾಮಿ ..

"Quoting the Mahalanobis Committee estimate of 1969 that, at a ceiling of 20 acres, 63 million acres of land would have been available for distribution, the AIKS says that only 4.6 million acres of the land has been declared surplus, which is about one per cent of the total cultivat. d and area of the country."

ಶ್ರೀ ಜಿ. ಎಚ್. ಗಂಗಾಧರನ್ .—ಅದು ನ್ಯಾಶನಲ್ ಹೆರಾಲ್ಡೇ ?

ಶ್ರೀ ಗಟ್ಟಿ ಚಂದ್ರಶೇಖರ್.—ಅದು ನಿಮ್ಮ ಇಂಡಿಯನ್ ಎಕ್ಸ್‌ಪ್ರೆಸ್ಸೇ, ಬೇಕಾದರೆ ಆ ಮೇಲೆ ಬನ್ನಿ ಪೇಪರ್ ಕೊಡುತ್ತೇವೆ ಓದುವಿರಂತೆ. ಇಷ್ಟೆಲ್ಲಾ ನಾವು ಕೆಲಸ ಮಾಡಿದ್ದರೂ ಕೂಡ ನೀವು ಏನು ಮಾಡಿಲ್ಲವೆಂದೂ ಹೇಳುತ್ತಿದ್ದೀರಿ. ನಿರುದ್ಯೋಗ ಸಮಸ್ಯೆ ನಿವಾರಣೆ ಮಾಡುವುದಕ್ಕಾಗಿ ಸ್ಟೈಫಂಡ್ ಕೊಡುತ್ತಿದ್ದೇವೆ. ತಿಂಗಳಿಗೆ ೧೫೦ ರೂಪಾಯಿಗಳನ್ನು ಕೊಡುತ್ತಿದ್ದೇವೆ ಅಲ್ಲವೆ ಶ್ರೀ ಬಸಪ್ಪನವರೇ ? ಅವರು ಒಪ್ಪಿಕೊಳ್ಳುತ್ತಾರೆ ಅವರು ಹಾಗೆಲ್ಲಾ ಹೋಗುವುದಿಲ್ಲ, ಯಾವ ಕಾಲದಲ್ಲಿ ಇಂಥ ಕೆಲಸವಾಗಿತ್ತು ? ಇದರ ಬಗೆ ಒಬ್ಬರು ಒಂದು ಮಾತು ಹೇಳಿದ್ದರು ಅವರು ಸದಸ್ಯ

ರಾಗಿದ್ದರು ಈಗ ಜನತಾ ಪಾರ್ಟಿಯ ಪ್ರಾಮುಖ್ಯ, ಸ್ಥಾನದಲ್ಲಿದ್ದಾರೆ, ಅವರು ಹೆಸರು ಹೆಂಗೇ ಹೇಳುವುದು ?

ಒಬ್ಬ ಸದಸ್ಯರು.—ಹೇಳಿಪರವಾಗಿಲ್ಲ.

ಶ್ರೀ ಗಟ್ಟಿ ಚಂದ್ರಶೇಖರ್.—ಎಲ್ಲಿ ಗ್ರಹಚಾರ...ನಾನು ೬ ವರ್ಷಗಳಿಂದ ಇಲ್ಲಿ ಇದ್ದೇನೆ. ಇನ್ನು ಸ್ವಲ್ಪ ಟೈಮ್ ಬೇಕು ಅದನ್ನೆಲ್ಲಾ ಹೇಳುವುದಕ್ಕೆ, ಅಲ್ಲಿಯವರೆಗೂ ತಡೆದುಕೊಳ್ಳಿ. ಅವರು ೧೯೭೭ನೇ ಇಸವಿಯಲ್ಲಿ ಚುನಾವಣೆಯ ಪ್ರಚಾರಕ್ಕೆ ಬಂದಿದ್ದರು. ಅವರ ಜೊತೆಗೆ ಕೇಂದ್ರದ ದೊಡ್ಡ ದೊಡ್ಡ ಮುಖಂಡರುಗಳೆಲ್ಲಾ ಬಂದಿದ್ದರು. ನಮ್ಮ ಕಡೆಗೆ ಯಾವ ಲೀಡರ್ಸ್ ಇಲ್ಲ ಅವರಿಗೆ ಬರುವುದಕ್ಕೂ ಸಹ ನೀವು ಹಲವಾರು ದಿಗ್ಬಂಧನೆಗಳು ಏನೇನೊ ಹಾಕಿದ್ದಿರಲ್ಲಾ. ಆಗಿದ್ದು ಆಗಲೀ ಜೈ ಶಂಕರ್ ಅಂತ ನಾವೇ ಹೊರಟೆವು. ಅವರು ಬಂದು ಭಾಷಣ ಮಾಡುತ್ತಿದ್ದುದನ್ನು ನಾವು ಕೇಳಿದ್ದೇವೆ, ಕಳೆದ ೩೦ ವರ್ಷಗಳಿಂದ ಈ ಕಾಂಗ್ರೆಸ್ ಸರ್ಕಾರ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡಿಲ್ಲ ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ನಿಮಗೆ ಉದ್ಯೋಗ ಒದಗಿಸುತ್ತೇವೆಂದು ಭಾಷಣ ಮಾಡಿದರು. ಅವರ ಭಾಷಣ ಕೇಳಿದ ನಂತರ ನಾನು ಅಲ್ಲಿಯ ಹಳ್ಳಿಯ ಜನಕ್ಕೆ ಹೇಳಿದೆ ಈಗ ಭಾಷಣ ಮಾಡಿದವರು ಪಂಜಾಬ್ ಕಡೆಯಿಂದ ಬಂದವರು ಅಲ್ಲಿ ರೇಜರ್ಸ್ ಮಾಡುವುದು ಜಾಸ್ತಿ. ಉದ್ಯೋಗ ಎಂದರೆ ನಮ್ಮ ಕಡೆಗೆ ಕ್ಷೌರ ಅಂತ, ಅದಕ್ಕೆ ನಿಮ್ಮ ನಿರುದ್ಯೋಗ ನಿವಾರಣೆ ಮಾಡುವುದಕ್ಕಾಗಿ ಒಬ್ಬೊಬ್ಬರಿಗೆ ಒಂದೊಂದು ಕತ್ತಿ ಕೊಡುತ್ತಾರಂತೆ ಕ್ಷೌರ ಮಾಡಲು ಎಂದು ಹೇಳಿದೆ. ಅಲ್ಲ ಸ್ವಾಮಿ ಒಂದು ಸೆಕೆಂಡಿಗೆ ಒಂದು ಮಕ್ಕಳು ಹುಟ್ಟುತ್ತಿರುವಾಗ ಅವರು ಹೆಂಗೆ ಲಕ್ಷಾಂತರ ಜನಕ್ಕೆ ನೌಕರಿ ಕೊಡಲು ಸಾಧ್ಯ ? ಇವತ್ತಿನ ದಿವಸ ಲಕ್ಷಾಂತರ ಜನ ಗ್ರಾಜ್ಯುಯೇಟ್ಸ್ ಬರುತ್ತಿದ್ದಾರೆ ಅವರಿಗೆಲ್ಲಾ ಎಲ್ಲಿಂದ ಕೆಲಸ ಕೊಡಲು ಸಾಧ್ಯ ? ಜನತೆಗೆ ಅಷ್ಟು ಭಾರೀ ಸುಳ್ಳು ಹೇಳಬಾರದು ಅಲ್ಲವೇ ಶ್ರೀ ಆನಂದರಾಯರೇ ? ಮತ್ತೆ ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀ ಬೊಮ್ಮಾಯ್‌ರವರು ಎಲ್ಲೆಲ್ಲಿ ನೋಡಿದರೂ ಭ್ರಷ್ಟಾಚಾರ ಭ್ರಷ್ಟಾಚಾರವಿದೆಂದು ಹೇಳುತ್ತಿದ್ದರು. ನಾನು ಇದರ ಬಗ್ಗೆ ೨೨ನೇ ಮಾರ್ಚಿ ೧೯೭೯ನೇ ಇಸ್ವಿಯಲ್ಲಿಯೇ ಒಂದು ವಿಷಯ ಹೇಳಿದ್ದೇನೆ ಅದು ಕನ್ನಡ ಪ್ರಭಾದಲ್ಲಿಯೂ ಬಂದಿದೆ ಬೇಕಾದರೆ ತಾವು ನೋಡಬಹುದು. ಅದು ಭ್ರಷ್ಟಾಚಾರವಲ್ಲ ಅದೆಲ್ಲಾ ಶಿಷ್ಟಾಚಾರ ಅಂತ. ಎಲ್ಲೋ ಅಲ್ಲಿ ಇಲ್ಲಿ ಒಬ್ಬಿಬ್ಬರು ಲಂಚ ತೆಗೆದುಕೊಂಡರೆ ಭ್ರಷ್ಟಾಚಾರ, ಅದು ಎಲ್ಲಾ ಕಡೆಗೂ ಇದ್ದರೆ ? ಹಿಂದೆ ದಿ॥ನೆಹರೂರವರ ಸರ್ಕಾರ ಇದ್ದಾಗ ಅವರ ಮಂತ್ರಿಮಂಡಲದಲ್ಲಿ ಒಬ್ಬರು ಗುಲ್ಜಾರಿ ಲಾಲ್ ನಂದ ಅಂತ ಇದ್ದರು ಅವರು ಈ ಲಂಚಗುಳಿತವನ್ನು ಇಲ್ಲದ ಹಾಗೆ ಮಾಡುತ್ತೇನೆ ಇಲ್ಲದೇ ಇದ್ದರೆ ಮಂತ್ರಿ ಸ್ಥಾನಕ್ಕೆ ರಾಜಿನಾಮೆ ಕೊಡುತ್ತೇನೆಂದು ಹೇಳಿ ಹೇಳಿ ಕೊನೆಗೇ ಅವರೇ ಹೊರಟು ಹೋದರು. ಇದು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ಕರ್ನಾಟಕ ರಾಜ್ಯ ಎಷ್ಟೋ ಉತ್ತಮ, ಅದಕ್ಕೆ ನಾನು ಹಿಂದೆಯೇ ಹೇಳಿರುವ ಹಾಗೆ ಕೋಡ್ ಆಫ್ ಕಾಂಡೆಕ್ಟ್ ಇದ್ದ ಹಾಗೆ, ಕಾಂಡೆಕ್ಟ್ ಆಫ್ ಕರಪ್ಷನ್ ಅಂತ ರೂಲ್ಸ್ ಮಾಡಿ ಬಿಟ್ಟು, ಯಾರಿಗೆ ಯಾರಿಗೆ ಎಷ್ಟೆಷ್ಟು ಲಂಚ ಕೊಡಬೇಕು, ಯಾವ ಯಾವ ಕೆಲಸಕ್ಕೆ ಎಷ್ಟೆಷ್ಟು ಕೊಟ್ಟು ಬಿಟ್ಟರೆ ಕೆಲಸವಾಗುತ್ತೆಂಬುದನ್ನು ಒಂದು ನಿಯಮ ಮಾಡಿಬಿಟ್ಟರೆ ಜನಕೂ ಅನುಮಾನ ಬರುವುದಿಲ್ಲ. ಇದು ಇವತ್ತು ನಿನ್ನೆಯದಲ್ಲಾ ಇದು ಹಿಂದಿನಿಂದಲೂ ನಡೆದುಕೊಂಡು ಬಂದಿರತಕ್ಕದ್ದನ್ನು ಅಷ್ಟುಸುಲಭವಾಗಿ ನಿಲ್ಲಿಸುವುದಕ್ಕಾಗುವುದಿಲ್ಲ. ಅದಕ್ಕೆ ಸಾಕಷ್ಟು ಟೈಮ್ ಬೇಕಾಗುತ್ತದೆ.

ಮಾನ್ಯ ಶ್ರೀ ಜೆ. ಎಚ್. ಪಟೇಲರವರು ಈಗ ತಾನೇ ಬರುತ್ತಿದ್ದಾರೆ, ನಾನು ಆಗಲೇ ಹೇಳಿದೆ ನೀವು ಬರೀ ಸ್ಟ್ಯಾಟಿಸ್‌ಟಿಕ್ಸ್‌ನ್ನು ಜನತೆಗೆ ಹೇಳಿದರೆ ನಂಬುವುದಿಲ್ಲ. ಜೊತೆಗೆ ಕೂಡ ಇವತ್ತು ಏನೇನು ಕೆಲಸಗಳಾಗುತ್ತಿವೆಯೆಂಬುದನ್ನು ಅವರು ನೋಡುತ್ತಿದ್ದಾರೆಂದು. ಈ ಭ್ರಷ್ಟಾಚಾರವನ್ನು ನಿಲ್ಲಿಸಬೇಕಾದರೆ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು, ಪ್ರತಿಯೊಬ್ಬ ಅಧಿಕಾರಿ, ರಾಜಕಾರಣಿಗಳೂ ತಿಳಿದುಕೊಂಡು, ಇದು ನಮ್ಮ ದೇಶ, ನಮ್ಮ ಸರ್ಕಾರ ಎನ್ನುವ ದೃಷ್ಟಿಯಿಂದ ಕೆಲಸ ಮಾಡಬೇಕು. ಇದರ ಬಗ್ಗೆ ೧೨ನೇ ಶತಮಾನದಲ್ಲಿಯೇ ಮಾನ್ಯ ಶ್ರೀ ಬಸವಣ್ಣನವರು ಒಂದು ತತ್ವವನ್ನು ಹಾಕಿಕೊಟ್ಟಿದ್ದಾರೆ,

> ‘‘ ಕಳ ಬೇಡ ಕೊಲಬೇಡ, ಹುಸಿಯ ನುಡಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಎದಿರ ಹಳಿಯಲು ಬೇಡ, ಇದೇ ಅಂತರಂಗ ಸುದ್ಧಿ, ಇದೇ ಬಹಿರಂಗ ಶುದ್ಧಿ ಇದೇ ನಮ್ಮ ಕೂಡಲ ಸಂಗಮದೇವರ ಒಲಿಸುವ ಪರಿ’’

ಎಂದು. ನೀವು ಸರ್ಕಾರದ ಪಾಲಸಿಯನ್ನು ಬೇಕಾದರೆ ಟೀಕೆ ಮಾಡಿ ಅದನ್ನು ಬಿಟ್ಟು ಶ್ರೀ ದೇವರಾಜ್ ಅರಸ್ ಇಂಥವರು, ಶ್ರೀ ಕಂತಯ್ಯನವರು ಇಂಥವರು ಅಂತ ಒಬ್ಬೊಬ್ಬರನ್ನು ಉದ್ದೇಶಿಸಿ ಹೇಳುವುದಕ್ಕೆ ಹೋಗಬೇಡಿ Great minds disscuss ideas : average minds discuss events : small minds discuss persons. I want all of you to be greatminds ಸರ್ಕಾರದ ಪಾಲಿಸಿ ಮೇಲೆ ಟೀಕೆ ಮಾಡಿ. ಅಪತ್ತು ಮಾನ್ಯ ಪಾಟೀಲರೋ ಯಾರೋ ಮಾತನಾಡುತ್ತ ಹೇಳುತ್ತಿದ್ದರು ಮಂತ್ರಿಮಂಡಲವೇ ಇಲ್ಲ. ಒಬ್ಬರೇ ಮಂತ್ರಿ, ಬಾಕಿ ಮಂತ್ರಿಗಳನ್ನೇ ಮಾಡಿದರೂ ಅದಕ್ಕೆ ಮುಖ್ಯಮಂತ್ರಿಗಳವರು ರುಜು ಹಾಕಲೇ ಬೇಕು ಹಾಗಂತ ಮಾನ್ಯ ಶ್ರೀ ಜೆ.ಎಚ್. ಪಟೇಲರು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಯಲ್ಲಿ ಕುಳಿತುಕೊಂಡು ರಾಜ್ಯಭಾರ ನಡೆಸುತ್ತಿರುವುದಕ್ಕೆ ಹೆಮ್ಮೆಪಡಬೇಕು ಎಂದು. ಹಿಂದೆ ಬ್ರಿಟೀಷರು ೬ ಸಾವಿರ ಮೈಲಿ ದೂರದಲ್ಲಿರತಕ್ಕ ಇಂಗ್ಲೆಂಡಿನಲ್ಲಿ ಕುಳಿತುಕೊಂಡು ೧೫೦ ವರ್ಷಗಳ ಕಾಲ ರಾಜ್ಯಭಾರ ಮಾಡಿದರು. ಆದರೆ ಇವತ್ತಿನ ದಿವಸ ಕೇವಲ ೬೦೦ ಮೈಲಿ ದೂರದಲ್ಲಿ ಕುಳಿತುಕೊಂಡು ರಾಜ್ಯಭಾರ ನಡೆಸುತ್ತಿರುವ ಮುಖ್ಯ ಮಂತ್ರಿಗಳ ಬಗ್ಗೆ ಇಂಥ ಮುಖ್ಯ ಮಂತ್ರಿಗಳು ಸಿಕ್ಕುತ್ತಾರೆಯೇ ಎಂದು ಹೆಮ್ಮೆ ಪಡಬೇಕು. ನಿಮಗೆ ಮಾತ್ರವಲ್ಲ : ನನಗೂ ಕೂಡ ಕಳೆದ ಒಂದೂವರೆ ತಿಂಗಳಿಂದ ಭೇಟಿಯಾಗಬೇಕೆಂದರೆ ಸಿಕ್ಕಿಲ್ಲ. ಸಿಗದಿದ್ದರೂ ಪರವಾಗಿಲ್ಲ, ದೇಶದ ಕೆಲಸವಾಗಲಿ. ಮಾನ್ಯ ಪಟೇಲರು ಇನ್ನೊಂದು ಮಾತನ್ನು ಹೇಳಿದರು, ಹೀಗೆ ಮಾಡಿದರೆ ನಮ್ಮನ್ನು ಎಲ್ಲಿಗೆ ತೆಗೆದುಕೊಂಡುಹೋಗುತ್ತೀರಿ ಎಂದು. ಹೀಗೆ ಇದ್ದರೆ ಒಳ್ಳೆಯ ಜಾಗಕ್ಕೆ ಕರೆದುಕೊಂಡು ಹೋಗುತ್ತೇವೆ. ಆದರೆ ನೀವು ಎಲ್ಲೆಲ್ಲೋ ಹೋಗಲಿಕ್ಕೆ ಪ್ರಯತ್ನ ಮಾಡಿದರೆ ಆಗುವುದಿಲ್ಲ. ದಯವಿಟ್ಟು ಗಂಭೀರವಾಗಿರಿ.

(ಸಭೆಯಲ್ಲಿ ನಗು)

೫-೦೦ ಪಿ. ಎಂ.

ನಮ್ಮ ಆಯವ್ಯಯ ನಿಜವಾಗಿಯೂ ಬಹಳ ಮಹತ್ವಪೂರ್ಣವಾದುದು. ಯಾರು ಏನು ಹೇಳಿದರೂ ಕರ್ನಾಟಕ ಜನತೆ ನಿಮ್ಮ ಮಾತನ್ನು ನಂಬುವುದಿಲ್ಲ. ಇನ್ನು ಮೇಲೆ ಬರೀ ಅಂಕಿ ಅಂಶಗಳನ್ನು ಹಾಕಿಕೊಂಡಿರುವುದನ್ನು ಬಿಟ್ಟು ಬಿಡಿ. ಅದೆಲ್ಲಾ ಸಾಮಾನ್ಯ ಜನಗಳಿಗೆ ಗೊತ್ತಾಗುವುದಿಲ್ಲ. ಸುಳ್ಳು ಲೆಕ್ಕ ಹೇಳುತ್ತಾರೆ, ಅವರೆಲ್ಲೋ ಗುಮಾಸ್ತರಾಗಿರಬಹುದೆಂದು ತಿಳಿದುಕೊಳ್ಳುತ್ತಾರೆ. ನಾವು ಏಷ್ಟು ಕೆಲಸ ಮಾಡುತ್ತಿದ್ದೇವೆ, ಎಂತಹ ಕೆಲಸ ಮಾಡುತ್ತಿದ್ದೇವೆ ಎಂಬುದನ್ನು ನೋಡಿ ನಮ್ಮ ಕಡೆಗೆ ಬನ್ನಿ.

ಇನ್ನು ಮಾನ್ಯ ಭೀಮಣ್ಣ ಖಂಡ್ರೆಯವರು ಲೆಜಿಸ್ಲೇಟರ್ಸ್ ಪೆನ್‌ಷನ್ ಪ್ರಾವಿಜಿಷನ್ ಬಗ್ಗೆ ಒಂದು ಆಬ್‌ಜಕ್ಷನ್ ಎತ್ತಿದರು. ಅವರು ವಯಸ್ಸಿನಲ್ಲಿ ಚಿಕ್ಕವರಾದರೂ ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ದುರ್ಯೋಧನನು ಶಕುನಿ ಕಡೆಯ ೧೦೦ ಜನ ಸಹೋದರರನ್ನು ಕಾರಾಗೃಹದಲ್ಲಿಟ್ಟು ಒಂದು ಹಿಡಿ ಅನ್ನ ಕೊಡುತ್ತಿದ್ದ. ಕೊನೆಗೆ ಆ ನೂರು ಜನರ ಪೈಕಿ ನೀನು ಒಬ್ಬ ಬದುಕಿರು ಎಂದು ಶಕುನಿಯೊಬ್ಬನನ್ನು ಬದುಕಿಸಿದ್ದ. ಹೀಗೆ ೧೮೦ ಜನ ಪಕ್ಕದವರೆಲ್ಲ ಹೋಗಿ ಕೊನೆಗೆ ಉಳಿದವರು ಏಕ ಮೇಷ್ರೋದೇವ ಶಂಘು.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಆ ಒಬ್ಬರನ್ನು ನೀವು ನುಂಗಿಬಿಟ್ಟಿದ್ದೀರಿ.

ಶ್ರೀ ಘಟ್ಟಿಚಂದ್ರಶೇಖರ್ :—ನುಂಗುವುದಕ್ಕೆ ಹೋಗುವುದಿಲ್ಲ, ಗಂಧದೊಡನೆ ಗುದ್ದಾಡಬಹುದು, ಆದರೆ ಸಗಣಿಯೊಡನೆ ಬೇಡ ಎಂದು ಒಂದು ಗಾದೆ ಇದೆ. ಆ ರೀತಿ ಕೆಲವರು ಆ ಕಡೆಯಿಂದ ಈ ಕಡೆ ಬರುತ್ತಿದ್ದಾರೆ : ಇನ್ನು ಕೆಲವರು ಬರುವವರು ಇದ್ದಾರೆ. ಹೀಗೆ ಬಂದು ಬಂದು ಅವರ ಸಂಖ್ಯೆ ಜಾಸ್ತಿಯಾಗಿ ಕೊನೆಗೆ ನಮ್ಮ ಕ್ಯೂ ನಿಂತುಹೋಗಬಹುದೆಂಬ ಅನುಮಾನ ಬಂದಿದೆ. ಪೆನ್‌ಷನ್ ಬಗ್ಗೆ ಬಹಳ ಟೀಕೆ ಟಿಪ್ಪಣಿಗಳನ್ನು ಮಾಡಿದರು. ಆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ನನಗೆ ಜವಾಬ್ದಾರಿಯನ್ನು ವಹಿಸಿದ್ದರು. ಸಂಬಳ ಕಡಿಮೆಯಾದರು ಪೆನ್‌ಷನ್ ಬಹಳ ಅಗತ್ಯವಾದುದು ೫-೧೦ ವರ್ಷ ಕೆಲಸ ಮಾಡಿ ಮನೆಗೆಹೋದರೆ ಯಾರೂ ಹಿಟ್ಟು ಹಾಕುವುದಿಲ್ಲ. ಅದಕ್ಕೆ ಕೆಲವರು ಏನು ಮಾಡುತ್ತಾರೆಂದರೆ, ಬರಿಗೈಯಲ್ಲಿ ಮನೆಗೆ ಹೋದರೆ ನಮ್ಮ ಮಕ್ಕಳು ಹಿಟ್ಟು ಹಾಕುವುದಿಲ್ಲವೆಂದು ಇರುವಾಗಲೇ ಏನಾದರೂ ಮಾಡಿಕೊಳ್ಳಬೇಕೆಂದು ಕೈಚಾಚುವುದಕ್ಕೆ ಹೋಗುತ್ತಾರೆ. ಪೆನ್‌ಷನ್ ಬರುತ್ತದೆಂಬ ಗ್ಯಾರಂಟಿಯಾದರೆ ಮನಸ್ಸಿಗೆ ಶಾಂತಿ ಇರುತ್ತದೆ. ಇದನ್ನು ಮಾನ್ಯ ಪಟೇಲರು ಒಪ್ಪುತ್ತಾರೆ, ಆದರೆ ಮಾನ್ಯ ಖಂಡ್ರೆ

ಯವರು ಒಪ್ಪುವುದಿಲ್ಲ. ಇದು ಬಹಳ ಮುಖ್ಯವಾದುದು. ಇದನ್ನು ಬೇರೆ ಇನ್ನಾರು ಮಾಡಿಲ್ಲ. ನಮ್ಮ ಶ್ರೀಮಾನ್ ದೇವರಾಜ್ ಅರಸ್‌ರವರು ಧೈರ್ಯ ಮಾಡಿ ಮಾಡಿದ್ದಾರೆ. ಆ ಸಂದರ್ಭದಲ್ಲಿ, ನಾನು ಕೂಡ ಬೇಕಾದಷ್ಟು ಬಯ್ಯಿಸಿಕೊಂಡಿದ್ದೇನೆ ; ಬಯ್ದರೆ ಒಳ್ಳೆಯದೇ ಆಯಿತು. ಪೆನ್‌ಷನ್ ಬರುವಂತೆ ಮಾಡಿಸಿದ್ದರೆ ನಿಮಗೆ ಕಾಫಿ ಕೊಡಿಸುತ್ತೇವೆಂದು ಹೇಳಿದವರ ಮುಖವೇ ಕಾಣುತ್ತಿಲ್ಲ. ದುಡ್ಡು ಬಂದಾಗ ಯಾರಿಗೂ ಹೇಳದೆ ತೆಗೆದುಕೊಂಡು ಹೋಗಿ ಬ್ಯಾಂಕಿಗೆ ಜಮಾ ಮಾಡುತ್ತಾರೆ. ಮಾನ್ಯ ಬೊಮ್ಮಾಯಿಯವರು ಪ್ರೊಹಿಬಿಷನ್ ಬಗ್ಗೆ ಮಾತನಾಡುತ್ತಿದ್ದಾಗ ನಾನು ಹೊರಗಿನಿಂದ ಒಳಗೆ ಬರುತ್ತಿದ್ದೆ ; ಆಗ ಅವರು ಮಾನ್ಯ ಘಟ್ಟೆ ಚಂದ್ರಶೇಖರ್ ಬಂದರು, ಪ್ರೊಹಿಬಿಷನ್ ಬಗ್ಗೆ ಸರಿಯಾಗಿ ಹೇಳುತ್ತಾರೆಂದು ಹೇಳಿದರು. ಆಗ ನನಗೆ ಅರ್ಥವಾಗಲಿಲ್ಲ. ಅವರು ವಯಸ್ಸಿನಲ್ಲಿ ಚಿಕ್ಕವರಾದರೂ ಸರ್ವಿಸ್‌ನಲ್ಲಿ ನನಗಿಂತ ಸೀನಿಯರ್ ಹ್ಯಾಂಡ್. ಸುಮಾರು ೨೦ ವರ್ಷಗಳಿಂದ ಸೆಂಚುರಿ ಕ್ಲಬ್ ಮೆಂಬರ್ ಆಗಿದ್ದಾರೆ. ಹಗಲೆಲ್ಲ ಪ್ರೊಹಿಬಿಷನ್ ತನ್ನಿ ಎಂದರೆ ಸಾವಿರಾರು ಮಂದಿ ಕೆಲಸಗಾರರಿಗೆ ಏನು ಮಾಡುತ್ತಾರೋ ಏನೋ ಎಂಬ ದಿಗ್ಭ್ರಮೆ ಬರುತ್ತದೆ. ನಮ್ಮ ದೇಶದಲ್ಲಿ ಸಿಗರೇಟ್ ಪ್ಯಾಕ್ ಮೇಲೆ 'ಸೇದಿ, ಮಜಾ ಮಾಡಿ ಎಂದು' ಎಂದು ಬರೆದಿರುವುದು, ಈ ಕಡೆ ಸೇದಬಾರದು ಒಳ್ಳೆಯದಲ್ಲ ಎಂದು ಹೇಳುವುದು, ಏಕೆ ಈ ರೀತಿ ಮಾಡಬೇಕು ? ನಮ್ಮ ಪ್ರಧಾನಿಯವರು ಗಾಂಧಿವಾದಿಗಳು ಇರಹುದು ; ಒಪ್ಪುತ್ತೇನೆ. ಆದರೆ ಯಾವ ದೇಶದಲ್ಲಾದರೂ ಪ್ರೊಹಿಬಿಟ್ ಮಾಡುವುದಕ್ಕೆ ಸಾಧ್ಯವಿದೆಯೆ ? ನಮ್ಮ ದೇಶದಲ್ಲಿಯಂತು ಸಕ್ಸಸ್‌ಫುಲ್ ಆಗುವುದಿಲ್ಲ. ಒಂದು ವೇಳೆ ಏನಾದರೂ ಜಾರಿಗೆ ತಂದರೆ ಅದು ಧರ್ಮಕ್ಕೆ, ಶಾಸ್ತ್ರಕ್ಕೆ ವಿರೋಧವಾಗುತ್ತದೆ. ಹಿಂದೆ ಋಷಿ ಮುನಿಗಳೆಲ್ಲ ಸುರೆ ಮದ್ಯವನ್ನು ದೇವತೆಗಳಿಗೆ ಅರ್ಪಿಸುತ್ತಿದ್ದರು. ಈಚಲ ಮರವನ್ನಾದರೂ ದೇವರು ಏತಕ್ಕೆ ಸೃಷ್ಟಿ ಮಾಡಿದ ? ಚನ್ನಗಿರಿಯ ಕಡೆ ಈಚಲ ಮರಗಳು ಬಹಳಇವೆ. ಒಮ್ಮೆ ನಾನು ಅಲ್ಲಿಗೆ ನನ್ನ ಅಳಿಯನ್ನನ್ನು ನೋಡಲು ಹೋಗಿದ್ದೆ. ಬೆಳಿಗ್ಗೆ ಸೂರ್ಯೋದಯದ ಒಳಗೆ ೪೦ ದಿನಗಳ ಕಾಲ ನೀರನ್ನು ಕುಡಿದರೆ ಯಾವ ಕಾಯಿಲೆಯು ಬರುವುದಿಲ್ಲ. ಇದು ದೈವ ಸೃಷ್ಟಿ. ಹಸುವಿನ ಹಾಲಿನಲ್ಲಿ ೬ ಪರ್ಸೆಂಟ್ ಆಲ್ಕೋಹಾಲ್ ಇದೆ ; ತಾಯಿಯ ಎದೆ ಹಾಲಿನಲ್ಲಿ ೮ ೯ ಪರ್ಸೆಂಟ್ ಆಲ್ಕೋಹಾಲ್ ಇದೆ. ಇದನ್ನೆಲ್ಲ ಗೊತ್ತಿರುವವರಿಗೆ ಹೇಳಬೇಕಾಗಿಲ್ಲ. ಮಕ್ಕಳು ಎದೆ ಹಾಲು ಕುಡಿದಾಗ ಮತ್ತು ಬಂದು ನಿದ್ದೆ ಹೋಗುತ್ತವೆ. ಇದೆಲ್ಲ ಇರುವಾಗ ಅದು ತೆಗೆಯಿರಿ ಇದು ತೆಗೆಯಿರಿ ಎಂದೆಲ್ಲ ಏತಕ್ಕೆ ಹೇಳಬೇಕು ? ಏಕೆ ತೆಗೆಯಬೇಕು ? ದುಡ್ಡಿದ್ದವರಿಗೇನೋ ಬೇಕಾದ್ದೆಲ್ಲ ಸಿಗುತ್ತದೆ, ಆದರೆ ಬಡವರ ಗತಿ ಏನು ? ಅವರು ಏನೇನೋ ಸಿಕ್ಕಿದ್ದೆಲ್ಲ ಕುಡಿದು ಹಾಳಾಗುತ್ತಾರೆ. ಒಟ್ಟಿನಲ್ಲಿ ಕರ್ನಾಟಕದಲ್ಲಿ ಪ್ರೊಹಿಬಿಷನ್ ತರುವುದಿಲ್ಲವೆಂದು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಲ್ಯಾಂಡ್ ರಿಫಾರಮ್ಸ್ ಬಗ್ಗೆ ಹೇಳುವುದಾದರೆ ಅದನ್ನು ನಾನು ಒಪ್ಪಿದ್ದೇನೆ. ಆದರೆ ಅದಕ್ಕೆ ನಮ್ಮ ಅನುಭವದ ಮೇಲೆ ಒಂದು ಕ್ಲಾಜ್ ಸೃಷ್ಟಿ ಮಾಡಬೇಕಾಗಿದೆ. ವಿಧವೆಯರು ಮತ್ತು ಸಣ್ಣ ಸಣ್ಣ ನಿವೃತ್ತ ಸರ್ಕಾರಿ ನೌಕರರು ಅರ್ಧ ಎಕರೆ, ಒಂದು ಎಕರೆ ಜಮೀನನ್ನು ಮಾಡಿಕೊಂಡಿದ್ದು ಅದನ್ನು ಗೇಣಿಗೆ ಕೊಟ್ಟುಕೊಂಡು ಬಂದದ್ದರಲ್ಲಿ ಅರ್ಧ ಭಾಗವನ್ನು ತೆಗೆದುಕೊಂಡು ಜೀವನ ಮಾಡುತ್ತಿದ್ದರು. ಒಂದು ಎಕರೆಗೆ ೧೦-೧೫ ಸಾವಿರ ರೂಪಾಯಿ ಬೆಲೆ ಇರುವಾಗ ಟ್ರಿಬ್ಯುನಲ್‌ನವರು ಒಂದು ಸಾವಿರ ರೂಪಾಯಿನೊಳಗೆ ಕೊಟ್ಟರೆ ಅವರ ಗತಿಯಾದರೂ ಏನಾಗಬೇಕು ? ಉದಾಹರಣೆಗೆ ಹೇಳುವುದಾದರೆ ೩ ವರ್ಷದ ಕೆಳಗೆ ಕರ್ನಾಟಕಕ್ಕೆ ಕೇಂದ್ರ ಸರ್ಕಾರದ ಲ್ಯಾಂಡ್ ರಿಫಾರಮ್ಸ್ ಅಡ್ವೈಸರ್ ಬಂದಿದ್ದಾರೆಂದು ಆಗಿನ ಕಾಲದಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಶ್ರೀಮಾನ್ ಕೆ. ಹೆಚ್. ಪಾಟಿಲರು ಶಾಸಕರನ್ನು ಕರೆಸಿದರು. ಕೆಲವು ಮಂದಿ ಶಾಸಕರು ಬಹಳ ಚೆನ್ನಾಗಿ ಹೊಗಳಿದರು. ಅವರುಗಳಿಗೆ, ಮಾನ್ಯ ಪಾಟೀಲರ ಕಾಲದಲ್ಲಿ ಎಲ್ಲಿ ಸೀಟು ಸಿಗುವುದಿಲ್ಲವೋ ಎಂಬ ಭಯ ಇತ್ತು. ಕೇಂದ್ರ ಸರ್ಕಾರದಿಂದ ಬಂದಿದ್ದವರು. 'Karnataka Land Reforms Act is more progressive' ಎಂದು ಎಲ್ಲ ಬರೆದುಕೊಂಡರು. ಕೊನೆಗೆ ನನಗೆ ಮಾತನಾಡಲು ಅವಕಾಶ ಕೊಟ್ಟರು. ಆಗ ನಾನು ಹೇಳಿದೆ, 'No doubt Karnataka Land Reforms Act is more progressive, but it makes so many holders to take poison' ಎಂದು. ಏಕೆ ಎಂದರು. ಅದಕ್ಕೆ ನಾನು ಹೇಳಿದೆ. For instance in my tribunal there is one

case. There is a widow with five children. She has half an acre of wet land. According to wet the Land Reforms Act we have to confirm the land to the tenant. What should the widow do ? Unfortunately she an old widow. If she was young, she would have some how managed. You have to give an humanitarian consideration. For this, he said 'you are supporting the landlords'. I said, "what do you mean by land lords ? If a per on holds half an acre or one acre, can he become a land lord ? ". I remember an instance in this connection. Once the Viceroy was going in coach. In fr nt he saw a house with a name board 'Lord Jagjit Singh'. The Viceroy could not contain himself. He wanted to know who gave him the title 'Lord'. He immediately asked his men to bring him to his chamber. Later the man was brought to the chambers of the Viceroy. The Viceroy asked him who gave him the title. He replied "Your Excellency, I was a landlord in Pakistan. After partition I migrated to India. My land remains in Pakistan and only the word 'L rd' remains with me."

(*Mr. Speaker in the Chair*)

ಅಂಥಾ ಲಾರ್ಡ್‌ಗಳು ! ಇವರಗಳ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳಿಗೆ ಬಹಳ ಕನಿಕರವಿದೆ ; ವಿಷಯ ಹೇಳಿದರೂ ಅವರು ತಿಳಿದುಕೊಳ್ಳುತ್ತಾರೆ ; ಯಾವುದನ್ನೂ ಇಲ್ಲವೆಂದು ಹೇಳುವುದಿಲ್ಲ. ಆದರೆ ಅವರ ಸುತ್ತಲೂ ಕೆಲವರು ಕೋಟೆ ಕಟ್ಟಿಕೊಂಡು ಬಿಟ್ಟಿರುವುದರಿಂದ ನಾವು ಹೋಗಿ ಅವರಿಗೆ ಸರಿಯಾಗಿ ಹೇಳಲಾಗುತ್ತಿಲ್ಲ. ಆದುದರಿಂದ ಈಗ ಅವರಲ್ಲಿ ಕೇಳಿಕೊಳ್ಳುತ್ತೇನೆ, ಸಣ್ಣ ಸಣ್ಣ ಜಮೀನು ಇರುವವರಿಗೆ ಮತ್ತು ವಿಧವೆಯರಿಗೆ ಹೆಚ್ಚು ದುಡ್ಡು ಕೊಡಬೇಕೆಂದು:

ಇನ್ನು ರಸ್ತೆ ಸಾರಿಗೆ ಸಂಸ್ಥೆ ಕುರಿತು ಮಾತನಾಡಬೇಕಾಗಿದೆ. ಮಾನ್ಯ ಗುಂಡುರಾಯರು ಇಲ್ಲೇ ಇದ್ದಾರೆ. ಅವರ ಮೇಲೆ ನನಗೆ ಅಭಿಮಾನವಿದೆ. ಅವರದು ಡೈನಮಿಕ್ ಪರ್ಸನಾಲಿಟಿ. ಆದರೆ, ಏಕೋ ಏನೋ ಡೈನಾಮೊ ಚಾರ್ಜ್ ಆಗುತ್ತಿಲ್ಲ ! ಬಸ್ಸುಗಳ ಬಗ್ಗೆ ಸರ್ಕಾರ ಜಾಗ್ರತೆ ತೀರ್ಮಾನ ತೆಗೆದುಕೊಳ್ಳಬೇಕು. ನಾವು ಬಸ್ಸುಗಳಲ್ಲಿ ಮರ್ಯಾದೆಯಿಂದ ತಿರುಗಾಡುವುದಕ್ಕಾಗುತ್ತಿಲ್ಲ. ಕಳೆದ ಅಧಿವೇಶನ ಮುಂದೂಡಿದಾಗ ಯುಗಾದಿ ಹಬ್ಬ. ಅದರ ಹಿಂದಿನ ದಿವಸ ಸಾಯಂಕಾಲ ಶಿವಮೊಗ್ಗಗೆ ಹೋಗಲೆಂದು ಬಸ್ ನಿಲ್ದಾಣಕ್ಕೆ ಹೋದೆ. ಸೀಟನ್ನು ರಿಜರ್ವ್ ಮಾಡಿಸಿದ್ದೆ. ಐದೂವರೆಗೆ ಹೊರಡುವ ಬಸ್ಸು ಐದೂಮುಕ್ಕಾಲಾದರೂ ಬರಲಿಲ್ಲ. ನಾನು ಹೋಗಿ, ಏತಕ್ಕೆ ಬಸ್ಸು ಇನ್ನೂ ಬರಲಿಲ್ಲವೆಂದು ವಿಚಾರಿಸಿದೆ. ಶಿವಮೊಗ್ಗದಿಂದ ಇನ್ನೂ ಬಸ್ ಬಂದಿಲ್ಲ. ಬಂದಿದ್ದೇ ಪುನಃ ಹೋಗಬೇಕು ಎಂದು ಅವರು ಉತ್ತರಿಸಿದರು. ಅಂತೂ ಆರು ಗಂಟೆಗೆ ಶಿವಮೊಗ್ಗಕ್ಕೆ ಹೊರಡುವ ಬಸ್ಸು ಜುಗು ಜುಗು ಅಂತ ಬಂತು. ತುಮಕೂರನ್ನು ಸೇರಿದೆವು. ತುಮಕೂರು ಬಿಡುವ ವೇಳೆಯಾದಾಗ, ಕಂಡಕ್ಟರ್ ಬಸ್ ಬಿಡಲು ಚಾಲಕನಿಗೆ ತಿಳಿಸಿದ. ಇಂಜಿನಲ್ಲಿ ನೀರು ಉಕ್ಕುತ್ತದೆ ನಾನೆಲ್ಲಿಂದ ಬಿಡಲಿ ಬಸ್ಸನ್ನು ? ಎಂದ ಡ್ರೈವರ್ ! ಕೊನೆಗೆ ನಾನು ರೈಲಿಗೆ ಹೋಗಬೇಕಾಯಿತು. ಅಲ್ಲಿ ಹಬ್ಬಕ್ಕೆ ಹೊರಟಿರುವ ಹೆಂಗಸರು ಜಾಸ್ತಿ ಇದ್ದರು. ಆ ಹೆಂಗಸರೆಲ್ಲ ಹಬ್ಬವನ್ನು ರೈಲಿನಲ್ಲಿ ಮಾಡಿದರೋ ಏನೋ ಗೊತ್ತಿಲ್ಲ. ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಬಸ್ ವ್ಯವಸ್ಥೆ ಚೆನ್ನಾಗಿದೆ ಎಂದು ಕೇಳಿದ್ದೇನೆ. ನಮ್ಮಲ್ಲೂ ಹಾಗೆ ಮಾಡಿ. ಖಾಸಗಿಯವರಿಗೂ ಬಸ್ ನಡೆಸಲು ಅಪ್ಪಣೆ ಕೊಡಿ. ನಮಗಿನ್ನೇನು ಪಾಸ್ ಇದೆಯಲ್ಲಾ, ಇದರಲ್ಲೇ ಹೋಗೋಣ ! ಮಾನ್ಯ ಗುಂಡೂರಾಯರು ಸಾರಿಗೆ ಸಚಿವರಾದ ಮೇಲೆ ಒಂದು ಸುಧಾರಣೆಯಾಯಿತು. ಅದೇನೆಂದರೆ ಮೊದಲೇ ಅಂಬಾಸಿಡರ್ ಕಾರಿನಲ್ಲಿ ಓಡಾಡುತ್ತಿದ್ದ ಗುಂಡೂರಾಯರು ಈಗ ಎಂ.ವೈ.ಎಫ್. ೨೦೦ನೇ ವಿದೇಶಿ ಕಾರಿನಲ್ಲಿ ಓಡಾಡುತ್ತಿದ್ದಾರೆ ! ಇಷ್ಟೇ ಸುಧಾರಣೆಯಾಗಿದ್ದು. ದಯವಿಟ್ಟು ಖಾಸಗಿಯವರಿಗೆ ಬಸ್ಸುಗಳನ್ನು ನಡೆಸಲು ಅಪ್ಪಣೆ ಕೊಟ್ಟು, ನಮ್ಮ ಮರ್ಯಾದೆ ಉಳಿಸಿ.

ಇನ್ನು ಸಿನಿಮಾಗಳ ವಿಚಾರ ಇಪ್ಪತ್ತು ಸಾವಿರ ಜನಸಂಖ್ಯೆಗಿಂತ ಕಡಮೆ ಇರುವ ಪ್ರದೇಶಗಳಲ್ಲಿ ಪ್ರದರ್ಶಿತವಾಗುವ ಕನ್ನಡ ಚಲನಚಿತ್ರಗಳಿಗೆ ಸರ್ಕಾರ ವಿಧಿಸುವ ಮನರಂಜನೆ ತೆರಿಗೆಯಲ್ಲಿ ಅರ್ಧದಷ್ಟು ವಿನಾಯಿತಿ ನೀಡಲಾಗಿದೆ. ಇಪ್ಪತ್ತು ಸಾವಿರಕ್ಕಿಂತ ಜಾಸ್ತಿ ಇದ್ದರೆ ತೆರಿಗೆ ಜಾಸ್ತಿ ಕೊಡಬೇಕು. ''ಎ'' ಸರ್ಟಿಫಿಕೇಟ್ ಇಲ್ಲದ ಚಲನಚಿತ್ರಗಳನ್ನು ಯಾರೂ ನೋಡುವುದಕ್ಕೆ ಹೋಗುವುದಿಲ್ಲ. ಯಾರಿಗಾದರೂ ''ಎ'' ಸರ್ಟಿಫಿಕೇಟ್ ಚಲನಚಿತ್ರಗಳೇ ಬೇಕು. ಇಪ್ಪತ್ತು ಸಾವಿರ ಜನಸಂಖ್ಯೆಗಿಂತ ಕಡಮೆ ಇರುವ ಪ್ರದೇಶಗಳಲ್ಲಿ ಪ್ರದರ್ಶಿತವಾಗುವ ಕನ್ನಡ ಚಲನಚಿತ್ರಗಳಿಗೆ ಅರ್ಧ ತೆರಿಗೆ ವಿನಾಯಿತಿ ನೀಡಲಾಗುವುದೆಂದರೆ, ಇಪ್ಪತ್ತು ಸಾವಿರದ ಮೇಲೆ ಒಬ್ಬ ಜಾಸ್ತಿಯಾದರೆ ಏನು ಮಾಡುವುದು ? ಊರಿನವರೆಲ್ಲ ಸೇರಿಕೊಂಡು ಅವನನ್ನು ಸಾಯಿಸಬೇಕಾಗುತ್ತದೆ, ಅಷ್ಟೇ ! ಆದುದರಿಂದ ಜನಸಂಖ್ಯೆ ಆಧಾರದ ಮೇಲೆ ತೆರಿಗೆ ವಿನಾಯಿತಿ ಕೊಡುವುದನ್ನು ನಿಲ್ಲಿಸಿಬಿಡಿ ಒಂದೂವರೆ ಟಿಕೆಟ್ ಪಡೆಯುವವರಿಗೆ ಇಷ್ಟು ಎರಡೂವರೆ ಟಿಕೆಟ್ ಪಡೆಯುವವರಿಗೆ ಇಷ್ಟು ಅಥವಾ ಇದಕ್ಕೂ ಮೇಲ್ಪಟ್ಟು ಬೆಲೆಯ ಟಿಕೆಟ್ ಪಡೆಯುವವರಿಗೆ ಇಷ್ಟು ಎಂದು ಮಾಡಿ. ಬೆಂಗಳೂರಿನಲ್ಲಿ ಐದು ರೂಪಾಯಿ ಟಿಕೆಟ್‌ಗೆ ಹದಿನೈದು ರೂಪಾಯಿ ಬ್ಲಾಕ್ ಕೊಟ್ಟು ನೋಡುತ್ತಾರೆ.

ಮಾರಾಟ ತೆರಿಗೆ ಮೇಲೆ ಶೇಕಡ ಪತ್ತರಷ್ಟು ಸರ್‌ಚಾರ್ಜ್‌ನ್ನು ಹಾಕಲಾಗಿದೆ. ಮಾನ್ಯ ಘೋರ್ಪಡೆಯವರು ಹಣಕಾಸಿನ ಮಂತ್ರಿಗಳಾಗಿದ್ದಾಗ, ಎಲ್ಲದರ ಮೇಲೂ ತೆರಿಗೆ ಹಾಕಿಬಿಟ್ಟಿದ್ದೀರಿ ಉಳಿದಿರುವುದು ಇನ್ನೊಂದೇ ಒಂದು ಇದೆ. ಅದೇ ಉಚ್ಛ್ವಾಸ-ನಿಚ್ಛ್ವಾಸದ ಮೇಲೂ ತೆರಿಗೆ ಹಾಕಿ ಬಿಡಿ ಎಂದು ಹೇಳಿದ್ದೆ. ಉಚ್ಛ್ವಾಸ-ನಿಚ್ಛ್ವಾಸದ ಮೇಲೂ ತೆರಿಗೆ ಹಾಕುವುದರಿಂದ ಉಸಿರಾಟದ ಮೇಲೆ ಹಿಡಿತಪಟ್ಟುಕೊಳ್ಳಲು ಅನುಕೂಲವಾಗುವುದಲ್ಲದೆ ಸರ್ಕಾರಕ್ಕೆ ಆದಾಯ ಬರುತ್ತದೆ ! ಮಾರಾಟ ತೆರಿಗೆ ಮೇಲೆ ಸರ್‌ಚಾರ್ಜ್ ವಿಧಿಸುವ ಬದಲು, ಈಗಿರುವ ಮಾರಾಟ ತೆರಿಗೆಯನ್ನು ಸರಿಯಾಗಿ ವಸೂಲು ಮಾಡಿದರೆ ಹೆಚ್ಚು ಆದಾಯ ಬರುತ್ತದೆ. ಆಕ್ಟ್ರಾಯನ್ನು ರದ್ದು ಮಾಡಲಾಗಿದೆ ; ಬಹಳ ಸಂತೋಷ. ಚಲನಚಿತ್ರಗಳ ಹಂಚಿಕೆದಾರರ ಮೇಲೆ ತೆರಿಗೆ ಹಾಕಿಲ್ಲ. ಅವರು ಬೇಕಾದಷ್ಟು ದುಡ್ಡು ಸಂಪಾದನೆಮಾಡುತ್ತಿದ್ದಾರೆ. ಬೇಕಾದರೆ ಸಿನಿಮಾ ಅನುಭವವಿರುವ ನನ್ನಂಥವನು ಸಮಿತಿಗೆ ಹಾಕಿ ವಿಚಾರ ಮಾಡೋಣ. ದೊಡ್ಡ ದೊಡ್ಡ ಐ.ಎ.ಎಸ್. ಅಧಿಕಾರಿಗಳು ಹವಾ ನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ಕೊಂಡು ಗುಣಾಕಾರ ಹಾಕಿದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ನಾನು ಹೇಳಿದ್ದನೆಲ್ಲ ಮಾನ್ಯ ಯಾಹ್ಯಾ ಸಾಹೇಬರು ಗಮನದಲ್ಲಿಟ್ಟುಕೊಳ್ಳುತ್ತಾರೆಂದು ಆಶಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

Attack on the house of Sri A. K. Subbaiah Leader of the Opposition in the Legislative Council

† SRI A. LAKSHMISAGAR.—Sir, with your kind permission I wish to raise every serious matter that took place this morning, and wish to bring this matter to the notice of the House and also to the notice of the Government. Permit me to narrate briefly the facts relating to this incident. It appears that Sri A. K. Subbaiah, the hon. the Leader of the Opposition in the other House, raised a matter relating to the demolition of unauthorised slums in Banashankari layout, and during the course of the discussion it appears that Sri Subbaiah personally mentioned certain hon. members of that House as being responsible for over-night coming up of these slums in that area, particularly Banashankari layout. The matter was terminated on the floor of the other House on the promise of the Hon'ble Minister for Municipal Administration that the entire matter would be gone into by a Committee of that House consisting of Members belonging to all sections of the House.